1) ರಿಟರ್ನಿಂಗ್ ಅಧಿಕಾರಿ ಮತ್ತು ಸಹಾಯಕ ರಿಟರ್ನಿಂಗ್ ಅಧಿಕಾರಿಗಳ ತಾತ್ಕಾಲಿಕ ಕಾರ್ಯಸ್ಥಾನವು ಅವರಿಗೆ ಗೊತ್ತುಪಡಿಸಿದ ಕಛೇರಿಯು ಇರುವ ಸ್ಥಳ ಆಗಿರುತ್ತದೆ.

2) ರಿಟರ್ನಿಂಗ್ ಅದಿಕಾರಿ ಮತ್ತು ಸಹಾಯಕ ರಿಟರ್ನಿಂಗ್ ಅಧಿಕಾರಿಗಳಿಗೆ ರಾಜ್ಯ ಚುನಾವಣಾ ಆಯೋಗವು ಹಾಗೂ ಈ ಕಛೇರಿಯಿಂದ ನೀಡಲಾಗುವ ಎಲ್ಲಾ ಆದೇಶಗಳು, ಸೂಚನೆಗಳು, ಮಾರ್ಗದರ್ಶನ ಇತ್ಯಾದಿಗಳನ್ನು ಆಯಾಯಾ ತಾಲ್ಲೂಕು ತಹಶೀಲ್ದಾರರ ಮುಖಾಂತರ ನೀಡಲಾಗುತ್ತದೆ. ಆದ್ದರಿಂದ ತಾಲ್ಲೂಕು ತಹಶೀಲ್ದಾರರೊಂದಿಗೆ ಸದಾ ಸಂಪರ್ಕವಿರಿಸಿಕೊಳ್ಳತಕ್ಕದ್ದು.

3) ರಿಟರ್ನಿಂಗ್ ಅಧಿಕಾರಿ ಮತ್ತು ಸಹಾಯಕ ರಿಟರ್ನಿಂಗ್ ಅಧಿಕಾರಿಗಳು ಚುನಾವಣೆಗಳ ವ್ಯವಸ್ಥೆಗೆ ಸಂಬಂಧಿಸಿದಂತೆ ಆಯಾ ತಾಲ್ಲೂಕು ತಹಶೀಲ್ದಾರರ ಮುಖಾಂತರ ಅಗತ್ಯ ಕ್ರಮ ತೆಗೆದುಕೊಳ್ಳತಕ್ಕದ್ದು. ತಾಲ್ಲೂಕು ತಹಶೀಲ್ದಾರರುಗಳು ಚುನಾವಣೆಗೆ ಸಂಬಂಧಿಸಿದಂತೆ ಎಲ್ಲಾ ವ್ಯವಸ್ಥೆಗಳನ್ನು ಮಾಡುವ ಮೇಲ್ವಿಚಾರಣೆಯನ್ನು ನಡೆಸುವ ಜವಾಬ್ದಾರಿಯನ್ನು ಹೊಂದಿರುತ್ತಾರೆ.

4) ರಿಟರ್ನಿಂಗ್ ಅಧಿಕಾರಿ ಮತ್ತು ಸಹಾಯಕ ರಿಟರ್ನಿಂಗ್ ಅಧಿಕಾರಿಗಳು ಸಂಬಂಧಿಸಿದ ತಾಲ್ಲೂಕು ಕಛೇರಿಯಲ್ಲಿ ತರಬೇತಿ ಸಾಮಗ್ರಿಗಳನ್ನು ಪಡೆಯಲು ತಪ್ಪದೇ ಹಾಜರಿರತಕ್ಕದ್ದು.

5) ಚುನಾವಣಾ ಕಾರ್ಯಗಳಿಗೆ ಗೈರು ಹಾಜರಾಗುವುದು ಅಥವಾ ಚುನಾವಣಾ ಕರ್ತವ್ಯಗಳಿಗೆ ಚ್ಯುತಿ ಎಸಗುವುದು ಚುನಾವಣಾ ಕಾಯಿದೆ ಮತ್ತು ನಿಯಮಗಳ ಮೇರೆಗೆ ದಂಡಾರ್ಹ ಅಪರಾಧವಾಗುತ್ತದೆ. ರಿಟರ್ನಿಂಗ್ ಅಧಿಕಾರಿ ಮತ್ತು ಸಹಾಯಕ ರಿಟರ್ನಿಂಗ್ ಅಧಿಕಾರಿಗಳು ಇಂತಹ ತೀವ್ರ ಕ್ರಮಗಳಿಗೆ ಅವಕಾಶ ನೀಡದಂತೆ ಕಾರ್ಯ ನಿರ್ವಹಿಸಲು ಸೂಚಿಸಿದೆ.

ರಿಟರ್ನಿಂಗ್/ ಸಹಾಯಕ ರಿಟರ್ನಿಂಗ್ ಅಧಿಕಾರಿಗಳ ಕಛೇರಿಯ ಮುಖ್ಯಸ್ಥರಿಗೆ ಸೂಚನೆಗಳು:

1) ರಿಟರ್ನಿಂಗ್ ಅಧಿಕಾರಿ ಮತ್ತು ಸಹಾಯಕ ರಿಟರ್ನಿಂಗ್ ಅಧಿಕಾರಿಗಳಾಗಿ ನೇಮಕಗೊಂಡಿರುವ ಅಧಿಕಾರಿ/ ಸಿಬ್ಬಂದಿಗೆ ಚುನಾವಣಾ ಕಾರ್ಯಗಳನ್ನು ನಿರ್ವಹಿಸಲು ಅವಕಾಶ ಮಾಡಿಕೊಡಲು ಹಾಗೂ ಅಗತ್ಯವಾದ ಎಲ್ಲಾ ನೆರವು ಮತ್ತು ಸಹಕಾರಗಳನ್ನು ನೀಡಲು ಸೂಚಿಸಿದೆ.

2) ರಿಟರ್ನಿಂಗ್ ಅಧಿಕಾರಿ ಮತ್ತು ಸಹಾಯಕ ರಿಟರ್ನಿಂಗ್ ಅಧಿಕಾರಿಗಳಾಗಿ ನೇಮಕಗೊಂಡಿರುವ ಅಧಿಕಾರಿ/ ಸಿಬ್ಬಂದಿಗೆ ಚುನಾವಣಾ ಪ್ರಕ್ರಿಯೆ ಪೂರ್ಣಗೊಳ್ಳುವವರೆಗೂ ಯಾವುದೇ ರೀತಿಯ ರಜೆಯನ್ನು ಮಂಜೂರು ಮಾಡುವಂತಿಲ್ಲ.

3) ರಿಟರ್ನಿಂಗ್ ಅಧಿಕಾರಿ ಮತ್ತು ಸಹಾಯಕ ರಿಟರ್ನಿಂಗ್ ಅಧಿಕಾರಿಗಳು ಚುನಾವಣೆಯ ಕಾರ್ಯಗಳನ್ನು ನಿರ್ವಹಿಸಲು ಯಾವುದೇ ರೀತಿಯ ಅಡಚಣೆಯನ್ನುಂಟು ಮಾಡಿದಲ್ಲಿ ಅದು ಚುನಾವಣಾ ಕಾಯ್ದೆ ಮತ್ತು ನಿಯಮಗಳ ಮೇರೆಗೆ ದಂಡಾರ್ಹ ಅಪರಾಧವಾಗುತ್ತದೆ. ಅಂತಹ ತೀವ್ರವಾದ ಕ್ರಮಗಳಿಗೆ ಅವಕಾಶ ನೀಡದಿರಲು ಇದನ್ನು ಗಮನಕ್ಕೆ ತರಲಾಗಿದೆ.

ಪಂಕಜ ಕುಮಾರ್ ಪಾಂಡೆ
ಡೆಪ್ಯುಟಿ ಕಮೀಷನರ್,
ಶಿವಮೊಗ್ಗ ಜಿಲ್ಲೆ ಶಿವಮೊಗ್ಗ.

ಆದೇಶ ಸಂಖ್ಯೆ ಚು.(4)ಸಿಆರ್ 57/10-11 ದಿನಾಂಕ 09-09-2010ಕ್ಕೆ

ಕೋಷ್ಟಕ

ಕ್ರಮ ಸಂಖ್ಯೆ	ತಾಲ್ಲೂಕು ಪಂಚಾಯತಿ ಕ್ಷೇತ್ರದ ಸಂಖ್ಯೆ ಮತ್ತು ಹೆಸರು	ರಿಟರ್ನಿಂಗ್ ಅಧಿಕಾರಿ	ಸಹಾಯಕ ರಿಟರ್ನಿಂಗ್ ಅಧಿಕಾರಿ
1	2	3	4
ತಾಲ್ಲೂಕಿನ ಹೆಸರು: ಶಿವಮೊಗ್ಗ			
1	ಅಬ್ಬಲಗೆರೆ	ಕಾರ್ಯ ನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯತಿ ಶಿವಮೊಗ್ಗ.	ಅಧೀಕ್ಷಕರು ತೋಟಗಾರಿಕಾ ಇಲಾಖೆ ಶಿವಮೊಗ್ಗ.
2	ಕುಂಚೇನಹಳ್ಳಿ		
3	ಕೊಮ್ಮನಾಳು		
4	ಆಯನೂರು		
5	ಹಾರನಹಳ್ಳಿ		ಅಧೀಕ್ಷಕರು (ಲೆಕ್ಕಪತ್ರ ಶಾಖೆ) ಜಿಲ್ಲಾ ಪಂಚಾಯತ್ ಶಿವಮೊಗ್ಗ.
6	ತಮ್ಮಡೀಹಳ್ಳಿ		
7	ರಾಮನಗರ		
8	ಕುಂಸಿ		
9	ಅಗಸವಳ್ಳಿ		
10	ಮೇಲಿನಹನಸವಾಡಿ	ತಹಶೀಲ್ದಾರ್ ಶಿವಮೊಗ್ಗ ತಾಲ್ಲೂಕು ಶಿವಮೊಗ್ಗ	ವ್ಯವಸ್ಥಾಪಕರು ರೇಷ್ಮೆ ಇಲಾಖೆ ಶಿವಮೊಗ್ಗ.
11	ಪಿಳ್ಳಂಗೆರೆ		
12	ಗಾಜನೂರು		
13	ಕಡೇಕಲ್		ವ್ಯವಸ್ಥಾಪಕರು ಕೆ.ಜಿ.ಐ.ಡಿ. ಶಿವಮೊಗ್ಗ.
14	ಹೊಳಲೂರು		
15	ಹೊಸೂಡಿ		

ಕ್ರಮ ಸಂಖ್ಯೆ	ತಾಲ್ಲೂಕು ಪಂಚಾಯತಿ ಕ್ಷೇತ್ರದ ಸಂಖ್ಯೆ ಮತ್ತು ಹೆಸರು	ರಿಟರ್ನಿಂಗ್ ಅಧಿಕಾರಿ	ಸಹಾಯಕ ರಿಟರ್ನಿಂಗ್ ಅಧಿಕಾರಿ
1	2	3	4
16	ಕೂಡ್ಲಿ		ವ್ಯವಸ್ಥಾಪಕರು ತಾಲ್ಲೂಕು ಸಮಾಜ ಕಲ್ಯಾಣ ಅಧಿಕಾರಿಗಳ ಕಛೇರಿ ಶಿವಮೊಗ್ಗ.
17	ಮತ್ತೂರು		
18	ನಿದಿಗೆ		

ಪಂಕಜ ಕುಮಾರ್ ಪಾಂಡೆ
ಡೆಪ್ಯುಟಿ ಕಮೀಷನರ್,
ಶಿವಮೊಗ್ಗ ಜಿಲ್ಲೆ ಶಿವಮೊಗ್ಗ.

ಆದೇಶ ಸಂಖ್ಯೆ ಚು.(4)ಸಿಆರ್ 57/10–11 ದಿನಾಂಕ:09–09–2010ಕ್ಕೆ
ಕೋಷ್ಟಕ

ಕ್ರಮ ಸಂಖ್ಯೆ	ತಾಲ್ಲೂಕು ಪಂಚಾಯತಿ ಕ್ಷೇತ್ರದ ಸಂಖ್ಯೆ ಮತ್ತು ಹೆಸರು	ರಿಟರ್ನಿಂಗ್ ಅಧಿಕಾರಿ	ಸಹಾಯಕ ರಿಟರ್ನಿಂಗ್ ಅಧಿಕಾರಿ
1	2	3	4
ತಾಲ್ಲೂಕಿನ ಹೆಸರುಃ ಭದ್ರಾವತಿ			
1	ಆನವೇರಿ	ಕಾರ್ಯ ನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯತಿ ಭದ್ರಾವತಿ	ಉಪ ತಹಶೀಲ್ದಾರ್ ನಾಡಕಛೇರಿ ಆನವೇರಿ.
2	ಮೈದೊಳಲು		
3	ಸಿದ್ಲೀಪುರ		
4	ಯಡೇಹಳ್ಳಿ		
5	ಹೊಳೆಹೊನ್ನೂರು		ಅಧೀಕ್ಷಕರು ಕಾರ್ಯಪಾಲಕ ಅಭಿಯಂತರರ ಕಛೇರಿ ನಂ. 4 ಬಿಆರ್‌ಎಲ್‌ಬಿಸಿ ಮಿಲಿಟರಿ ಕ್ಯಾಂಪ್ ಭದ್ರಾವತಿ.
6	ಕಲ್ಲಿಹಾಳು		
7	ಅರಬಿಳಚಿ		
8	ಕೂಡ್ಲಿಗೆರೆ	ತಹಶೀಲ್ದಾರ್ ಭದ್ರಾವತಿ ತಾಲ್ಲೂಕು ಭದ್ರಾವತಿ	ಸಹಾಯಕ ಕೃಷಿ ಅಧಿಕಾರಿ ಭದ್ರಾವತಿ.
9	ಕಾಗೆಕೋಡಮಗ್ಗೆ		
10	ಅರಳಿಹಳ್ಳಿ		
11	ಅಂತರಗಂಗೆ		
12	ಮಾವಿನಕೆರೆ		ACDPO. ಶಿಶು ಮತ್ತು ಮಕ್ಕಳ ಕಲ್ಯಾಣಾಭಿವೃದ್ಧಿ ಇಲಾಖೆ ಭದ್ರಾವತಿ
13	ಬಾರಂದೂರು		
14	ಕಲ್ಲಹಳ್ಳಿ		ಉಪ ಪ್ರಾಂಶುಪಾಲರು ಸರ್ಕಾರಿ ಪದವಿಪೂರ್ವ ಕಾಲೇಜು ಆನವೇರಿ.
15	ಸಿಂಗನಮನೆ		
16	ದೊಣಬಗಟ್ಟ		
17	ಹಿರಿಯೂರು		
18	ಹುಣಸೇಕಟ್ಟೆ		

ಪಂಕಜ ಕುಮಾರ್ ಪಾಂಡೆ
ಡೆಪ್ಯುಟಿ ಕಮೀಷನರ್,
ಶಿವಮೊಗ್ಗ ಜಿಲ್ಲೆ ಶಿವಮೊಗ್ಗ.

ಆದೇಶ ಸಂಖ್ಯೆ ಚು.(4)ಸಿಆರ್ 57/10-11 ದಿನಾಂಕ 09-09-2010ಕ್ಕೆ

ಕೋಷ್ಟಕ

ಕ್ರಮ ಸಂಖ್ಯೆ	ತಾಲ್ಲೂಕು ಪಂಚಾಯತಿ ಕ್ಷೇತ್ರದ ಸಂಖ್ಯೆ ಮತ್ತು ಹೆಸರು	ರಿಟರ್ನಿಂಗ್ ಅಧಿಕಾರಿ	ಸಹಾಯಕ ರಿಟರ್ನಿಂಗ್ ಅಧಿಕಾರಿ
1	**2**	**3**	**4**
	ತಾಲ್ಲೂಕಿನ ಹೆಸರುಃ ತೀರ್ಥಹಳ್ಳಿ		
1	ಆಗುಂಬೆ	ತಹಶೀಲ್ದಾರ್ ತೀರ್ಥಹಳ್ಳಿ ತಾಲ್ಲೂಕು ತೀರ್ಥಹಳ್ಳಿ	ಮ್ಯಾನೇಜರ್ ಕೃಷಿ ನಿರ್ದೇಶಕರ ಕಛೇರಿ ತೀರ್ಥಹಳ್ಳಿ.
2	ಆರಗ		
3	ಅರೇಹಳ್ಳಿ		
4	ದೇವಂಗಿ		ಶಿಕ್ಷಣ ಸಂಯೋಜಕರು ಅಗ್ರಹಾರ ಹೋಬಳಿ ತೀರ್ಥಹಳ್ಳಿ.
5	ಹಾದಿಗಲ್ಲು		
6	ಹೊದ್ಲ ಅರಳಾಪುರ		
7	ಕನ್ನಂಗಿ	ಸಹಾಯಕ ಕಾರ್ಯಪಾಲಕ ಅಭಿಯಂತರರು ಲೋಕೋಪಯೋಗಿ ಇಲಾಖೆ ತೀರ್ಥಹಳ್ಳಿ.	ಮ್ಯಾನೇಜರ್ ಬಿ.ಇ.ಓ. ಕಛೇರಿ ತೀರ್ಥಹಳ್ಳಿ.
8	ಕೋಣಂದೂರು		
9	ಮಾಳೂರು		
10	ಮಂಡಗದ್ದೆ		ಶಿಕ್ಷಣ ಸಂಯೋಜಕರು ಮುತ್ತೂರು ಹೋಬಳಿ ತೀರ್ಥಹಳ್ಳಿ.
11	ಮೇಗರವಳ್ಳಿ		
12	ಮುಳಬಾಗಿಲು		
13	ಸಾಲ್ಗಡಿ		

ಪಂಕಜ ಕುಮಾರ್ ಪಾಂಡೆ
ಡೆಪ್ಯುಟಿ ಕಮೀಷನರ್,
ಶಿವಮೊಗ್ಗ ಜಿಲ್ಲೆ ಶಿವಮೊಗ್ಗ.

ಆದೇಶ ಸಂಖ್ಯೆ ಚು.(4)ಸಿಆರ್ 57/10-11 ದಿನಾಂಕ 09-09-2010ಕ್ಕೆ

ಕೋಷ್ಟಕ

ಕ್ರಮ ಸಂಖ್ಯೆ	ತಾಲ್ಲೂಕು ಪಂಚಾಯತಿ ಕ್ಷೇತ್ರದ ಸಂಖ್ಯೆ ಮತ್ತು ಹೆಸರು	ರಿಟರ್ನಿಂಗ್ ಅಧಿಕಾರಿ	ಸಹಾಯಕ ರಿಟರ್ನಿಂಗ್ ಅಧಿಕಾರಿ
1	**2**	**3**	**4**
	ತಾಲ್ಲೂಕಿನ ಹೆಸರುಃ ಸಾಗರ		
1	ಆನಂದಪುರ	ತಹಶೀಲ್ದಾರ್ ಸಾಗರ ತಾಲ್ಲೂಕು ಸಾಗರ	ಕೈಗಾರಿಕಾ ವಿಸ್ತರಣಾಧಿಕಾರಿ ಸಾಗರ ತಾಲ್ಲೂಕು.
2	ಆವಿನಹಳ್ಳಿ		
3	ಬರೂರು		
4	ಗೌತಮಪುರ		
5	ಹೆಗ್ಗೋಡು		ತಾಲ್ಲೂಕು ಶಿರಸ್ತೇದಾರ್ ತಾಲ್ಲೂಕು ಕಛೇರಿ ಸಾಗರ.
7	ಹೊಸೂರು		
12	ತ್ಯಾಗರ್ತಿ		
6	ಹಿರೇನೆಲ್ಲೂರು	ಎ.ಇ.ಇ. ಜಿಲ್ಲಾ ಪಂಚಾಯತಿ ಸಾಗರ 5 ಉಪವಿಭಾಗ ಸಾಗರ.	ಆರ್.ಆರ್. ಶಿರಸ್ತೇದಾರ್ ತಾಲ್ಲೂಕು ಕಛೇರಿ ಸಾಗರ.
8	ಕಾನ್ಲೆ		

ಕ್ರಮ ಸಂಖ್ಯೆ	ತಾಲ್ಲೂಕು ಪಂಚಾಯತಿ ಕ್ಷೇತ್ರದ ಸಂಖ್ಯೆ ಮತ್ತು ಹೆಸರು	ರಿಟರ್ನಿಂಗ್ ಅಧಿಕಾರಿ	ಸಹಾಯಕ ರಿಟರ್ನಿಂಗ್ ಅಧಿಕಾರಿ
1	**2**	**3**	**4**
9	ಕೆಳದಿ		
10	ತಾಳಗುಪ್ಪ		
11	ತಲವಾಟ		ಉಪ ತಹಶೀಲ್ದಾರ್ ನಾಡಕಛೇರಿ, ಆವಿನಹಳ್ಳಿ.
13	ತುಮರಿ		
14	ಯಡಜಿಗಳೇಮನೆ		

ಪಂಕಜ ಕುಮಾರ್ ಪಾಂಡೆ
ಡೆಪ್ಯುಟಿ ಕಮೀಷನರ್,
ಶಿವಮೊಗ್ಗ ಜಿಲ್ಲೆ ಶಿವಮೊಗ್ಗ.

ಆದೇಶ ಸಂಖ್ಯೆ ಚು.(4)ಸಿಆರ್ 57/10–11 ದಿನಾಂಕ 09–09–2010ಕ್ಕೆ

ಕೋಷ್ಟಕ

ಕ್ರಮ ಸಂಖ್ಯೆ	ತಾಲ್ಲೂಕು ಪಂಚಾಯತಿ ಕ್ಷೇತ್ರದ ಸಂಖ್ಯೆ ಮತ್ತು ಹೆಸರು	ರಿಟರ್ನಿಂಗ್ ಅಧಿಕಾರಿ	ಸಹಾಯಕ ರಿಟರ್ನಿಂಗ್ ಅಧಿಕಾರಿ
1	**2**	**3**	**4**
ತಾಲ್ಲೂಕಿನ ಹೆಸರುಃ ಸೊರಬ			
1	ಶಕುನವಳ್ಳಿ	ತಹಶೀಲ್ದಾರ್ ಸೊರಬ ತಾಲ್ಲೂಕು ಸೊರಬ	ಮುಖ್ಯಾಧಿಕಾರಿ ಪಟ್ಟಣ ಪಂಚಾಯಿತಿ ಸೊರಬ
2	ಅಗಸನಹಳ್ಳಿ		
3	ಭಾರಂಗಿ		
4	ಎಣ್ಣೆಕೊಪ್ಪ		
5	ಆನವಟ್ಟಿ		ವ್ಯವಸ್ಥಾಪಕರು ತಾಲ್ಲೂಕು ಪಂಚಾಯಿತಿ ಸೊರಬ
6	ಕುಬಟೂರು		
7	ತೆಲಗುಂದ		
8	ಜಡೆ		
9	ಹರೀಶಿ	ಸಹಾಯಕ ಕೃಷಿ ನಿರ್ದೇಶಕರು ಕೃಷಿ ಇಲಾಖೆ, ಸೊರಬ	ಶಿಕ್ಷಣ ಸಂಯೋಜಕರು, ಬಿ.ಇ.ಓ. ಕಛೇರಿ ಸೊರಬ
10	ಕುಪ್ಪಗಡ್ಡೆ		
11	ತತ್ತೂರು		
12	ಉದ್ರಿ		
13	ಚಂದ್ರಗುತ್ತಿ		ಸೂಪರಿಂಟೆಂಡೆಂಟ್ ಸರ್ಕಾರಿ ಪಾಲಿಟೆಕ್ನಿಕ್ ಸೊರಬ
14	ಹಳೇಸೊರಬ		
15	ಮಾವಲಿ		
16	ಶಿಗ್ಗಾ		ಕೈಗಾರಿಕಾ ವಿಸ್ತರಣಾಧಿಕಾರಿಗಳು ಸೊರಬ
17	ಹೊಸಬಾಳೆ		
18	ಉಳವಿ		

ಪಂಕಜ ಕುಮಾರ್ ಪಾಂಡೆ
ಡೆಪ್ಯುಟಿ ಕಮೀಷನರ್,
ಶಿವಮೊಗ್ಗ ಜಿಲ್ಲೆ ಶಿವಮೊಗ್ಗ.

ಆದೇಶ ಸಂಖ್ಯೆ ಚು.(4)ಸಿಆರ್ 57/10-11 ದಿನಾಂಕ 09-09-2010ಕ್ಕೆ

ಕೋಷ್ಟಕ

ಕ್ರಮ ಸಂಖ್ಯೆ	ತಾಲ್ಲೂಕು ಪಂಚಾಯತಿ ಕ್ಷೇತ್ರದ ಸಂಖ್ಯೆ ಮತ್ತು ಹೆಸರು	ರಿಟರ್ನಿಂಗ್ ಅಧಿಕಾರಿ	ಸಹಾಯಕ ರಿಟರ್ನಿಂಗ್ ಅಧಿಕಾರಿ
1	2	3	4
	ತಾಲ್ಲೂಕಿನ ಹೆಸರುಃ ಶಿಕಾರಿಪುರ		
1	ಈಸೂರು	ತಹಶೀಲ್ದಾರ್	ಉಪತಹಶೀಲ್ದಾರ್ ನಾಡ ಕಛೇರಿ ಶಿರಾಳಕೊಪ್ಪ
2	ಹಾರೋಗೊಪ್ಪ	ಶಿಕಾರಿಪುರ ತಾಲ್ಲೂಕು	
3	ಹಿತ್ತಲ	ಶಿಕಾರಿಪುರ	
4	ಸಾಲೂರು		
5	ಹೊಸೂರು		ವ್ಯವಸ್ಥಾಪಕರು
6	ಕಾಗಿನೆಲ್ಲಿ		ಸಮಾಜ ಕಲ್ಯಾಣ ಇಲಾಖೆ
7	ಮಾರವಳ್ಳಿ		ಶಿಕಾರಿಪುರ.
8	ಕಪ್ಪನಹಳ್ಳಿ		
9	ಅಂಬಾರಕೊಪ್ಪ	ಕಾರ್ಯ ನಿರ್ವಾಹಕ ಅಧಿಕಾರಿ	ವ್ಯವಸ್ಥಾಪಕರು
10	ಮತ್ತಿಕೋಟೆ	ತಾಲ್ಲೂಕು ಪಂಚಾಯತಿ	ತಾಲ್ಲೂಕು ಪಂಚಾಯತಿ
11	ತಾಳಗುಂದ	ಶಿಕಾರಿಪುರ.	ಶಿಕಾರಿಪುರ.
12	ಬಿಳಕಿ		
13	ಸುಣ್ಣದಕೊಪ್ಪ		ಸಮನ್ವಯ ಅಧಿಕಾರಿ
14	ತೊಗರ್ಸಿ		ಕ್ಷೇತ್ರ ಸಂಪನ್ಮೂಲ ಕೇಂದ್ರ
15	ಉಡುಗಣಿ		ಶಿಕಾರಿಪುರ
16	ಮಲ್ಲೇನಹಳ್ಳಿ		ಅಧೀಕ್ಷಕರು, ಬಿ.ಇ.ಓ. ಕಛೇರಿ
17	ಚಿಕ್ಕಜಂಬೂರು		ಶಿಕಾರಿಪುರ.

ಪಂಕಜ ಕುಮಾರ್ ಪಾಂಡೆ
ಡೆಪ್ಯುಟಿ ಕಮೀಷನರ್,
ಶಿವಮೊಗ್ಗ ಜಿಲ್ಲೆ ಶಿವಮೊಗ್ಗ.

ಆದೇಶ ಸಂಖ್ಯೆ ಚು.(4)ಸಿಆರ್ 57/10-11 ದಿನಾಂಕ 09-09-2010ಕ್ಕೆ

ಕೋಷ್ಟಕ

ಕ್ರಮ ಸಂಖ್ಯೆ	ತಾಲ್ಲೂಕು ಪಂಚಾಯತಿ ಕ್ಷೇತ್ರದ ಸಂಖ್ಯೆ ಮತ್ತು ಹೆಸರು	ರಿಟರ್ನಿಂಗ್ ಅಧಿಕಾರಿ	ಸಹಾಯಕ ರಿಟರ್ನಿಂಗ್ ಅಧಿಕಾರಿ
1	2	3	4
	ತಾಲ್ಲೂಕಿನ ಹೆಸರುಃ ಹೊಸನಗರ		
1	ಅರಸಾಳು	ತಹಶೀಲ್ದಾರ್	ತಾಲ್ಲೂಕು ದೈಹಿಕ ಶಿಕ್ಷಣ ಪರಿವೀಕ್ಷಕರು
2	ಹೆದ್ದಾರಿಪುರ	ಹೊಸನಗರ ತಾಲ್ಲೂಕು	ಶಿಕ್ಷಣಾಧಿಕಾರಿಗಳ ಕಛೇರಿ ಹೊಸನಗರ.
3	ಹುಂಚಾ	ಹೊಸನಗರ	
11	ರಿಪ್ಪನ್‌ಪೇಟೆ		

ಕ್ರಮ ಸಂಖ್ಯೆ	ತಾಲ್ಲೂಕು ಪಂಚಾಯತಿ ಕ್ಷೇತ್ರದ ಸಂಖ್ಯೆ ಮತ್ತು ಹೆಸರು	ರಿಟರ್ನಿಂಗ್ ಅಧಿಕಾರಿ	ಸಹಾಯಕ ರಿಟರ್ನಿಂಗ್ ಅಧಿಕಾರಿ
1	2	3	4
4	ಜೇನಿ		ಶಿಕ್ಷಣ ಸಂಯೋಜಕರು ಕಸಬಾ ವ್ಯಾಪ್ತಿ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ ಹೊಸನಗರ
6	ಕಳೂರು		
7	ಕೋಡೂರು		
8	ಮಾರುತೀಪುರ		
5	ಖೈರಗುಂದ		ಶಿರಸ್ತೇದಾರ್ ಸಾಮಾಜಿಕ ಭದ್ರಾ ಯೋಜನೆ ತಾಲ್ಲೂಕು ಕಛೇರಿ, ಹೊಸನಗರ
9	ಮೂಡುಗೊಪ್ಪ		
10	ನಿಟ್ಟೂರು		

ಪಂಕಜ ಕುಮಾರ್ ಪಾಂಡೆ

ಪಿ.ಆರ್.1462

ಡೆಪ್ಯುಟಿ ಕಮೀಷನರ್,

ಶಿವಮೊಗ್ಗ ಜಿಲ್ಲೆ ಶಿವಮೊಗ್ಗ.

ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ

ಅಧಿಸೂಚನೆ

ಸಂಖ್ಯೆ: ಲೋಇ 10 ಸೇವಾಬ 10 ಬೆಂಗಳೂರು, ದಿನಾಂಕ:6ನೇ ಸೆಪ್ಟೆಂಬರ್, 2010

ಸರ್ಕಾರದ ಅಧಿಸೂಚನೆ ಸಂಖ್ಯೆ: ಲೋಇ:12:ಸೇವಾಬ:08 (i) ದಿನಾಂಕ:01.07.2009ರಲ್ಲಿ ಶ್ರೀ ಪ್ರತಾಪ್, ಅಧೀಕ್ಷಕರು, ಅಧೀಕ್ಷಕ ಇಂಜಿನಿಯರ್‌ರವರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವೃತ್ತ, ಬಳ್ಳಾರಿ ಇವರಿಗೆ ರೂ.10800-20025ರ ವೇತನ ಶ್ರೇಣಿಯ ನಿಬಂಧಕರ ಹುದ್ದೆಗೆ (ಗುಂಪು-ಬಿ ಹುದ್ದೆ) ಸ್ಥಾನಪನ್ನ ಬಡ್ತಿ ನೀಡಿ, ಸರ್ಕಾರದ ಅಧಿಸೂಚನೆ ಸಂಖ್ಯೆ: ಲೋಇ:12:ಸೇವಾಬ:08 ದಿನಾಂಕ:31.08.2009ರಲ್ಲಿ ಇವರ ಸೇವೆಯನ್ನು ಮುಂದಿನ ಸ್ಥಳ ನಿಯುಕ್ತಿಗಾಗಿ ಜಲ ಸಂಪನ್ಮೂಲ ಇಲಾಖೆಯ ವಶಕ್ಕೆ ನೀಡಲಾಗಿತ್ತು. ಅದರಂತೆ ಜಲಸಂಪನ್ಮೂಲ ಇಲಾಖೆಯು ಸದರಿಯವರಿಗೆ ಅಧಿಸೂಚನೆ ಸಂಖ್ಯೆ: ಜಸಂಇ:196:ಸೇಎಸು:09 ದಿನಾಂಕ:01.10.2009ರಲ್ಲಿ ಮುಖ್ಯ ಇಂಜಿನಿಯರ್‌ರವರ ಕಛೇರಿ, ನೀರಾವರಿ ಕೇಂದ್ರವಲಯ, ಮುನಿರಾಬಾದ್, ಇಲ್ಲಿ ಖಾಲಿ ಇದ್ದ ನಿಬಂಧಕರ ಹುದ್ದೆಗೆ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಸ್ಥಳ ನಿಯುಕ್ತಿಗೊಳಿಸಿತ್ತು.

ಶ್ರೀ ಪ್ರತಾಪ್, ನಿಬಂಧಕರು, ಇವರು ಸ್ಥಳ ನಿಯುಕ್ತಿಗೊಳಿಸಿದ ಹುದ್ದೆಯಲ್ಲಿ 4 ತಿಂಗಳು ಕಳೆದರೂ ಸಹ ಕರ್ತವ್ಯಕ್ಕೆ ಹಾಜರಾಗದಿದ್ದ ಕಾರಣ ಜಲ ಸಂಪನ್ಮೂಲ ಇಲಾಖೆಯು ಸಂಖ್ಯೆ: ಜಸಂಇ:21:ಸೇಎಸು:10 ದಿನಾಂಕ:04.02.2010ರಲ್ಲಿ ಈ ಕೆಳಕಂಡಂತೆ ನೋಟೀಸ್ ನೀಡಲಾಗಿತ್ತು.

"ಶ್ರೀ ಪ್ರತಾಪ್, ನಿಬಂಧಕರು, ಆದ ನಿಮಗೆ ಶ್ರೀ ಜಿ. ಸೋಮಶೇಖರ ರೆಡ್ಡಿ, ಮಾನ್ಯ ಶಾಸಕರು, ಬಳ್ಳಾರಿ ನಗರ ವಿಧಾನ ಸಭಾ ಕ್ಷೇತ್ರ ಇವರ ಶಿಫಾರಸ್ಸು ಪತ್ರ ಮತ್ತು ನಿಮ್ಮ ಮನವಿಯ ಮೇರೆಗೆ ನೀವು ಕೋರಿದಂತೆ ಮುಖ್ಯ ಇಂಜಿನಿಯರ್‌ರವರ ಕಛೇರಿ, ನೀರಾವರಿ ಕೇಂದ್ರವಲಯ, ಮುನಿರಾಬಾದ್, ಇಲ್ಲಿ ಖಾಲಿ ಇದ್ದ ನಿಬಂಧಕರ ಹುದ್ದೆಗೆ ನಿಮ್ಮನ್ನು ಸ್ಥಳ ನಿಯುಕ್ತಿಗೊಳಿಸಲಾಗಿದೆ. ಆದರೆ ನೀವು ಇದುವರೆವಿಗೂ ಸದರಿ ಹುದ್ದೆಯ ಕಾರ್ಯಭಾರವನ್ನು ವಹಿಸಿಕೊಂಡಿರುವುದಿಲ್ಲ.

ಆದ್ದರಿಂದ ನೀವು ವರದಿ ಮಾಡಿಕೊಳ್ಳದೇ ಇರುವ ಕಾರಣವನ್ನು ನೋಟೀಸ್ ತಲುಪಿದ ಒಂದು ವಾರದೊಳಗೆ ಸರ್ಕಾರಕ್ಕೆ ಹೇಳಿಕೆ ಸಲ್ಲಿಸಲು, ತಪ್ಪಿದಲ್ಲಿ ನಿಮ್ಮ ಹೇಳಿಕೆ ಏನೂ ಇಲ್ಲವೆಂದು ಭಾವಿಸಿ ನಿಯಮಾನುಸಾರ ಕ್ರಮ ಜರುಗಿಸಲಾಗುವುದು ಅಲ್ಲದೆ ನಿಮಗೆ ನೀಡಿರುವ ಮುಂಬಡ್ತಿಯನ್ನು ಹಿಂಪಡೆಯಲು ಶಿಫಾರಸ್ಸು ಮಾಡಲಾಗುವುದು."

ಸದರಿ ನೋಟೀಸ್‌ಗೆ ಶ್ರೀ ಪ್ರತಾಪ್, ಅಧೀಕ್ಷಕರು ಪಂಚಾಯಿತ್ ರಾಜ್ ಇಂಜಿನಿಯರಿಂಗ್ ವೃತ್ತ, ಬಳ್ಳಾರಿ ಇವರು ಜಲ ಸಂಪನ್ಮೂಲ ಇಲಾಖೆಗೆ ಸಲ್ಲಿಸಿದ ದಿನಾಂಕ:17.02.2010ರ ಹೇಳಿಕೆಯಲ್ಲಿ, ಸದರಿಯವರು ಸುಮಾರು 5 ವರ್ಷಗಳಿಂದ ಚರ್ಮವ್ಯಾಧಿ ಖಾಯಿಲೆಯಿಂದ ಬಳಲುತ್ತಿದ್ದು ಚಿಕಿತ್ಸೆ ಪಡೆಯುತ್ತಿರುವುದರಿಂದ ಮತ್ತು 10 ವರ್ಷಗಳಿಂದ ರಕ್ತ ಒತ್ತಡದಿಂದ ಬಳಲುತ್ತಿರುವುದರಿಂದ ಹಾಗೂ ಪತ್ನಿಯವರಿಗೆ ಕಣ್ಣಿನ ಪೊರೆಯ ಚಿಕಿತ್ಸೆಯನ್ನು ಫೆಬ್ರವರಿ 2010ರಲ್ಲಿ ಮಾಡಬೇಕಾಗಿರುವುದರಿಂದ ಕಣ್ಣಿನ ಶಸ್ತ್ರ ಚಿಕಿತ್ಸೆ ಆದ ನಂತರ ಕೂಡಲೇ ನಿಬಂಧಕರ ಹುದ್ದೆಯ ಕಾರ್ಯಭಾರ ವಹಿಸಿಕೊಳ್ಳುತ್ತೇನೆ ಎಂದು ಹೇಳಿಕೆ ನೀಡಿರುತ್ತಾರೆ. ಹಾಗೂ ದಿನಾಂಕ:10.02.2010ರಲ್ಲಿ ಲೋಕೋಪಯೋಗಿ ಇಲಾಖೆಗೆ ಸಲ್ಲಿಸಿದ ಮನವಿಯಲ್ಲಿ ವೈದ್ಯಕೀಯ ಕಾರಣಗಳ ಜೊತೆಗೆ ಬಳ್ಳಾರಿಯ ಅಧೀಕ್ಷಕ ಇಂಜಿನಿಯರ್‌ರವರ ಕಛೇರಿಯಲ್ಲಿ ಹಾಲಿ ನಿಬಂಧಕರಾಗಿ ಕಾರ್ಯನಿರ್ವಹಿಸುತ್ತಿರುವ ಶ್ರೀ ಶ್ರೀಕಾಂತ ಕಡ್ಲೂರುರವರು ದಿನಾಂಕ:30.11.2010ರಂದು ಸೇವೆಯಿಂದ ವಯೋ ನಿವೃತ್ತಿ ಹೊಂದಲಿರುವ ಕಾರಣ ದಿನಾಂಕ:01.12.2010ರಿಂದ ತೆರನಾಗಲಿರುವ ನಿಬಂಧಕರ ಹುದ್ದೆಗೆ ತಮ್ಮನ್ನು ಮರುನೇಮಿಸಿ ಆದೇಶ ಹೊರಡಿಸುವಂತೆ ಕೋರಿರುತ್ತಾರೆ.

ಜಲ ಸಂಪನ್ಮೂಲ ಇಲಾಖೆಯು ಕ್ರಮಾಂಕ: ಜಸಂಇ 23 ಸೇಎಸು 10 ದಿನಾಂಕ:22.03.2010ರಲ್ಲಿ ಲೋಕೋಪಯೋಗಿ ಇಲಾಖೆಗೆ ಬರೆದ ಅನಧಿಕೃತ ಟಿಪ್ಪಣಿಯಲ್ಲಿ, ಶ್ರೀ ಪ್ರತಾಪ್, ಅಧೀಕ್ಷಕರು ಇವರ ಕೋರಿಕೆಯಂತೆ ಮುಖ್ಯ ಇಂಜಿನಿಯರ್, ನೀರಾವರಿ ಕೇಂದ್ರ ವಲಯ, ಮುನಿರಾಬಾದ್ ಇಲ್ಲಿ ಖಾಲಿ ಇದ್ದ ನಿಬಂಧಕರ ಹುದ್ದೆಗೆ ಸ್ಥಳ ನಿಯುಕ್ತಿ ಆದೇಶ ನೀಡಿದ್ದು ಸದರಿಯವರು ಇದುವರೆವಿಗೂ ಕರ್ತವ್ಯಕ್ಕೆ ಹಾಜರಾಗಿರುವುದಿಲ್ಲ. ಸದರಿಯವರ ಪತ್ರ ಮತ್ತು ದಾಖಲೆಗಳನ್ನು ಪರಿಶೀಲಿಸಲಾಗಿ ಅವರಿಗೆ ಬಳ್ಳಾರಿಯಿಂದ ಮುನಿರಾಬಾದ್ ಬರುವ ಇಚ್ಛೆ ಇರುವುದಿಲ್ಲವೆಂದು ಕಂಡುಬರುತ್ತದೆ. ಆದ್ದರಿಂದ ಇವರ ಮುಂಬಡ್ತಿ ಬಗ್ಗೆ ಪರಿಶೀಲಿಸಲು ಹಾಗೂ ಮುಖ್ಯ ಇಂಜಿನಿಯರ್, ನೀರಾವರಿ ಕೇಂದ್ರವಲಯ, ಮುನಿರಾಬಾದ್ ಈ ಕಛೇರಿಯಲ್ಲಿ ಖಾಲಿ ಇರುವ ನಿಬಂಧಕರ ಹುದ್ದೆಗೆ ಬೇರೆ ಯಾರನ್ನಾದರೂ ನೇಮಕ ಮಾಡಲು ಒಬ್ಬ ನಿಬಂಧಕರ ಸೇವೆಯನ್ನು ಜಲ ಸಂಪನ್ಮೂಲ ಇಲಾಖೆಯ ವಶಕ್ಕೆ ನೀಡಬೇಕೆಂದು ಕೋರುತ್ತಾ ಶ್ರೀ ಪ್ರತಾಪ್‌ರವರು ದಿನಾಂಕ:04.02.2010ರ ನೋಟೀಸ್‌ಗೆ ನೀಡಿರುವ ಉತ್ತರ ಹಾಗೂ ಅಡಕಗಳ ಪ್ರತಿಗಳನ್ನು ಮುಂದಿನ ಕ್ರಮಕ್ಕಾಗಿ ಲೋಕೋಪಯೋಗಿ ಇಲಾಖೆಗೆ ಕಳುಹಿಸಿತ್ತು.

ಜಲ ಸಂಪನ್ಮೂಲ ಇಲಾಖೆಯು ನೀಡಿದ ನೋಟೀಸ್ ಮತ್ತು ಜಲ ಸಂಪನ್ಮೂಲ ಇಲಾಖೆಯ ದಿನಾಂಕ:22.03.2010ರ ಅನಧಿಕೃತ ಟಿಪ್ಪಣಿಯಲ್ಲಿ ಲೋಕೋಪಯೋಗಿ ಇಲಾಖೆಗೆ ಕಳುಹಿಸಿದ ವರದಿಯ ಮೇರೆಗೆ ಶ್ರೀ ಪ್ರತಾಪ್, ಅಧೀಕ್ಷಕರು ಪಂಚಾಯಿತ್‌ರಾಜ್ ಇಂಜಿನಿಯರಿಂಗ್ ವೃತ್ತ, ಬಳ್ಳಾರಿ ಇವರಿಗೆ ಸಂಖ್ಯೆ: ಲೋಇ:10:ಸೇವಾಬ:10 ದಿನಾಂಕ:08.04.2010ರಲ್ಲಿ ನೀಡಿದ ನೋಟೀಸ್‌ನಲ್ಲಿ 1977ರ ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಾವಳಿಯ ನಿಯಮ 4(ಎ) ಮೇರೆಗೆ ಮುಂಬಡ್ತಿಯನ್ನು ಅಂಗೀಕರಿಸದೇ ಇದ್ದಲ್ಲಿ ಮುಂಬಡ್ತಿ ಆದೇಶವನ್ನು ಸ್ವೀಕರಿಸಿದ 15 ದಿನಗಳೊಳಗಾಗಿ ಮುಂಬಡ್ತಿಯನ್ನು ಮುಂದೂಡಲು ಸಕಾರಣಗಳೊಂದಿಗೆ ಅರ್ಜಿಯನ್ನು ಸಕ್ಷಮ ಪ್ರಾಧಿಕಾರವಾದ ಸರ್ಕಾರಕ್ಕೆ ಸಲ್ಲಿಸಬೇಕಿತ್ತು. ಆದರೆ ಮುಂಬಡ್ತಿಯನ್ನು ಮುಂದೂಡಲು ಕೋರಿ ಮೇಲ್ಕಂಡಂತೆ ನಿಗದಿತ ಸಮಯದಲ್ಲಿ ಅರ್ಜಿಯನ್ನು ಸರ್ಕಾರಕ್ಕೆ ಸಲ್ಲಿಸಿರುವುದಿಲ್ಲ. ಇದರಿಂದಾಗಿ ಸರ್ಕಾರದ ಕೆಲಸ ಕಾರ್ಯಗಳಿಗೆ ಅಡಚಣೆಯಾಗಿರುತ್ತದೆ. ಅಲ್ಲದೆ 1966ರ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿಯ ನಿಯಮ 3(i)(ii)(iii)ರ ಮೇರೆಗೆ ದುರ್ವರ್ತನೆಯಾಗಿರುತ್ತದೆ. ಆದ ಕಾರಣ ಮುಂಬಡ್ತಿ ನೀಡಿ ಸ್ಥಳ ನಿಯುಕ್ತಿಗೊಳಿಸಿರುವ ಕಛೇರಿಯಲ್ಲಿ ಕೂಡಲೇ ಕರ್ತವ್ಯದ ಮೇಲೆ ಹಾಜರಾಗುವುದು. ತಪ್ಪಿದಲ್ಲಿ ದುರ್ವರ್ತನೆ ಎಂದು ಪರಿಗಣಿಸಿ ನಿಯಮಾನುಸಾರ ಶಿಸ್ತು ಕ್ರಮ ಜರುಗಿಸಲಾಗುವುದು ಎಂದು ಅವರಿಗೆ ತಿಳಿಸಲಾಗಿತ್ತು.

ಆದರೆ ಶ್ರೀ ಪ್ರತಾಪ್, ಅಧೀಕ್ಷಕರು, ಇವರು ಮೇಲ್ಕಂಡ ನೋಟೀಸ್‌ಗೆ ದಿನಾಂಕ:30.05.2010ರಂದು ಸರ್ಕಾರಕ್ಕೆ ಸಲ್ಲಿಸಿರುವ ಹೇಳಿಕೆಯಲ್ಲಿ ಅವರ ಪತ್ನಿಯವರಿಗೆ ಉದರ ಭಾಗದಲ್ಲಿ ಹರಣಿ ಶಸ್ತ್ರ ಚಿಕಿತ್ಸೆ ಮಾಡಿಸಿರುವುದರಿಂದ 3 ತಿಂಗಳ ವಿಶ್ರಾಂತಿಗೆ ವೈದ್ಯರು ಸಲಹೆ ನೀಡಿರುವುದರಿಂದ ಪತ್ನಿಯವರ ಜೊತೆಯಲ್ಲಿ ಇರುವಿಕೆಯು ಅಗತ್ಯವಾಗಿರುವುದರಿಂದ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಕಛೇರಿಯಿಂದ ಇನ್ನೂ ಬಿಡುಗಡೆ ಹೊಂದಿರುವುದಿಲ್ಲ ಎಂದು ತಿಳಿಸಿ ಸ್ವಲ್ಪ ಕಾಲಾವಕಾಶದ ನಂತರ ಮುಂಬಡ್ತಿ ನೀಡಿದ ಕಛೇರಿಯಲ್ಲಿ ಕರ್ತವ್ಯದ ಮೇಲೆ ಹಾಜರಾಗುತ್ತೇನೆ ಎಂದು ಕೌಟುಂಬಿಕ ಕಾರಣಗಳನ್ನು ನೀಡಿರುವುದು ಸಮಂಜಸವಾಗಿರುವುದಿಲ್ಲ. ಹಾಗೂ ಮುಂದೆ ಉದ್ಭವಿಸಲಿರುವ ಹುದ್ದೆಗೆ ಮುಂಚಿತವಾಗಿಯೇ ನೇಮಕಾತಿ ಆದೇಶ ನೀಡುವಂತೆ ವಿನಂತಿಸಿದ್ದು ಈ ಕೋರಿಕೆಯೂ ಸಹ ಸಮಂಜಸವಾಗಿರುವುದಿಲ್ಲ. ಕಾರಣ ಮುಂದೆ ಉದ್ಭವಿಸಲಿರುವ ಹುದ್ದೆಗೆ ಮುಂಚಿತವಾಗಿಯೇ ನೇಮಕಾತಿ ನೀಡುವುದು ನಿಯಮಬದ್ಧವಾಗಿರುವುದಿಲ್ಲ.

ಶ್ರೀ ಪ್ರತಾಪ್, ಅಧೀಕ್ಷಕ ಇವರು, ನಿಬಂಧಕರ ಹುದ್ದೆಯ ಮುಂಬಡ್ತಿ ಆದೇಶ ಸ್ವೀಕರಿಸಿದ 15 ದಿನಗಳೊಳಗಾಗಿ ಮುಂಬಡ್ತಿ ನಿರಾಕರಿಸಲು ಸಕಾರಣಗಳೊಂದಿಗೆ ಅನುಮತಿ ಕೋರಿ ಕರ್ನಾಟಕ ಸಿವಿಲ್ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು 1977ರ ನಿಯಮ 4(ಎ)ರನ್ವಯ ಸಕ್ಷಮ ನೇಮಕಾತಿ ಪ್ರಾಧಿಕಾರಕ್ಕೆ ಲಿಖಿತ ಮೂಲಕ ಅರ್ಜಿ ಸಲ್ಲಿಸಿರುವುದಿಲ್ಲ. ಸದರಿಯವರಿಗೆ ನೋಟೀಸ್ ನೀಡಿ ಕೂಡಲೇ ನಿಬಂಧಕರ ಹುದ್ದೆಯ ಕರ್ತವ್ಯದ ಮೇಲೆ ಹಾಜರಾಗುವಂತೆ ಅವಕಾಶ ಕಲ್ಪಿಸಿದ್ದರೂ ಸಹ ಸದರಿಯವರು ವೈಯುಕ್ತಿಕ ಕಾರಣಗಳನ್ನು ನೀಡುತ್ತಾ ಮುಂಬಡ್ತಿ ಹುದ್ದೆಯ ಕರ್ತವ್ಯದ ಮೇಲೆ ಹಾಜರಾಗದೇ ಇರುವುದರಿಂದ ಸದರಿ ಹುದ್ದೆಯು 11 ತಿಂಗಳಿಂದ ಖಾಲಿ ಇದ್ದು ಕಛೇರಿಯ ದೈನಂದಿನ ಕೆಲಸ ಕಾರ್ಯಗಳಿಗೆ ಅಡಚಣೆ ಉಂಟುಮಾಡಿದ್ದು, 1966ರ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿಯ ನಿಯಮ 3(i)(ii)(iii)ರ ಮೇರೆಗೆ ದುರ್ವರ್ತನೆಯಾಗುತ್ತದೆ. ಆದ್ದರಿಂದ, ಸದರಿಯವರ ವಿರುದ್ಧ ಶಿಸ್ತು ಕ್ರಮ ಬಾಕಿ ಇರಿಸಿ ಸದರಿಯವರಿಗೆ ಸರ್ಕಾರದ ಸಂಖ್ಯೆ: ಲೋಇ:12:ಸೇವಾಬ:08 ದಿನಾಂಕ:01.07.2009ರ ಅಧಿಸೂಚನೆಯಲ್ಲಿ ನಿಬಂಧಕರ ಹುದ್ದೆಗೆ ನೀಡಿದ್ದ ಮುಂಬಡ್ತಿಯನ್ನು ತಕ್ಷಣದಿಂದಲೇ ಜಾರಿಗೆ ಬರುವಂತೆ ಹಿಂಪಡೆಯಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಲಕ್ಷ್ಮೀನರಸಿಂಹಯ್ಯ

ಪಿ.ಆರ್.1442

ಸರ್ಕಾರದ ಅಧೀನ ಕಾರ್ಯದರ್ಶಿ,
ಲೋಕೋಪಯೋಗಿ, ಬಂದರು ಮತ್ತು ಒಳನಾಡು
ಜಲಸಾರಿಗೆ ಇಲಾಖೆ (ಸೇವೆಗಳು–ಬಿ)

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

ತಿದ್ದುಪಡಿ

ಸಂಖ್ಯೆ: ಮಮಇ 364 ಎಸ್‌ಜೆಡಿ 2004, ಬೆಂಗಳೂರು, ದಿನಾಂಕ:17ನೇ ಆಗಸ್ಟ್, 2010

ಸರ್ಕಾರಿ ಅಧಿಸೂಚನೆ ಸಂಖ್ಯೆ:ಮಮಇ 364 ಎಸ್‌ಜೆಡಿ 2004 ದಿನಾಂಕ:16.02.2010ರ 4ನೇ ಸಾಲಿನಲ್ಲಿ ನಮೂದಿಸಿರುವ "ನಿಯಮ–32ರ ಬಡ್ತಿಯನ್ನು ಪೂರ್ವಾನ್ವಯವಾಗಿ ಕ್ರಮಬದ್ಧಗೊಳಿಸಿ ಬಡ್ತಿ ನೀಡಿ" ಎಂಬುದಕ್ಕೆ ಬದಲಾಗಿ "ಕರ್ನಾಟಕ ನಾಗರೀಕ ಸೇವಾ (ಮುಂಬಡ್ತಿ/ವೇತನ/ಪಿಂಚಣಿ ಕ್ರಮಬದ್ಧತೆ) ನಿಯಮಾವಳಿ 1978ರ ನಿಯಮ 2(3)ರನ್ವಯ ಪೂರ್ವಾನ್ವಯವಾಗಿ ಬಡ್ತಿ ನೀಡಿ" ಎಂದು ತಿದ್ದಿ ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಬಿ. ಕಮಲಮ್ಮ

ಪಿ.ಆರ್.1311

ಸರ್ಕಾರದ ಅಧೀನ ಕಾರ್ಯದರ್ಶಿ–2,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ.

PROCEEDINGS OF THE DIRECTOR, DEPARTMENT OF MINES AND GEOLOGY, BANGALORE

No.DMG:110AML 91:2010-11/4162, Dated:5th August, 2010

RML 1119

Sub: Rejection of renewal Mining lease application in respect of M/s Wadi Stone Marketing Company Private Limited Dated:27.09.1991 over an extent of 1098 Acres in Bommanahalli, balawadgi, Ravoor, Ingalgi & Wadi Villages of Chittapur Taluk, Gulbarga District.

Ref: 1) Renewal application No.110 AML 91 Dated:27.09.1991.

2) This Office Notice No.ಗಭೂಇ: 110 AML 91:74:RVN:91 ML 1119:06-07:1085: Dated:25.04.2005.

3) This Office Notice No. ಗಭೂಇ: 110 AML 91:74:RVN:92 ML 1119:06-07:2347: Dated:25.05.2007.

4) This Office Proceedings No. ಗಭೂಇ: 110 AML 91:74:RVN: ML 1119:14783 Dated:26.02.2008.

5) This Office Notice No. ಗಭೂಇ: 110 AML 91:2009-10:4939-40, Dated:30.12.2009.

6) Your reply letter Dated:11.01.2010 & 30.04.2010.

7) This Office Notice No. ಗಭೂಇ: 110 AML 91:ML 1119:3551-53 Dated:21/01.06.2010.

M/s Wadi Stone Marketing Company Private Limited was sanctioned ML for Limestone for a period of 20 years with effect from 01.10.1952 which was subsequently renewed for 20 years on 01.10.1972. The said lease was determined on 04.06.1987 for non-payment of due vide G.O.No.CI 62 MRC 84 and application was restored vide G.O.No.2/12/34/87/MV Dated:27.07.1988. In the meantime the lessee filed 2nd renewal application Dated:27.09.1991 by reducing the area to 389.18 acres.

The renewal application was rejected vide this office proceeding No. ಗಭೂಇ: 110 AML 91:74:RVN:ML 1119:14783 Dated:26.02.2008 on Dated:26.02.2008 for nonpayment of royalty on which the lessee filed W.p. No.40026/08 before Hon'ble High Court of Karnataka Gulbarga bench in which order was passed on 17.09.2008 to consider representation of petitioner in accordance with law.

As per the orders of Hon'ble High Court of Karnataka to consider the application in accordance with law a notice Dated:30.12.2010 was served under Rule 26(1) of MCR 1960 as to why the renewal application Dated:27.09.1991 should not be rejected. The Lessee has replied to the said Notice on 11.01.2010. The reply was verified, and found not satisfactory to consider his application.

As per Lessee's request for Personnel hearing, Opportunity was also given to appear before the Director, Department of Mines and Geology on 23.06.2010 to present along with relevant documents. But the applicant/lessee failed to appear for the said hearing.

As per G.O.No.CI 149 MMN 96 Dated:03.07.1996 & 21.09.1996 Government declared that the area in question, containing Shahabad stone in Gulbarga district as quarry areas, and this area has to be considered for grant of minor mineral. Hence the limestone in Gulbarga district known as Shabad stone has lost its character of Major Mineral. Accordingly a notification No.DMG:QLA:Minor Mineral:96:13431 Dated:23.11.1996 was issued. So there is no provision to consider or sanction the same for major mineral mining lease. Hence your renewal application for mining lease cannot be considered for grant. Hence the following orders:

ORDER

I, M.E. Shivalinga Murthy, I.A.S. Director of Mines and Geology, in exercise of powers conferred under Government Notification No.CI 03 MMN 1995 Dated:27.05.1995, and Notification No.CI 214 MMM 2006, Dated:09.02.2007 do hereby reject the said Renewal of Mining lease application No.110 AML 91 (RML 1119) for the above said reasons.

Director,

PR-1277 Mines and Geology, Bangalore.

OFFICE OF THE PRL. DISTRICT AND SESSIONS JUDGE, BIJAPUR

Notice U/R 6(2) of the Notaries Rules 1956.

BIJAPUR DATED: 19TH DAY OF AUGUST 2010

Where as the below mentioned Advocates of Bijapur have made the applications under Rule 4(2) of the Notaries Rule 1956 for appointing them as a notary in the form of memorial for Revenue taluka of Bijapur. Therefore, objections if any, for the appointment of the below mentioned applicants as notary for Revenue Taluk of Bijapur, be submitted to the undersigned within 14 days from the date of publication of this notice in the Karnataka Gazette.

Sl. No.	Name of the Advocates
1.	Miss K.S. Kandagal, Shahapeth Galli, Bijapur.
2.	Sri S.B. Hiremath, Plot No.67, NGO Colony, Near Jain Mandir, Darga, Bijapur.
3.	Sri S.M. Kamatagi, C/o Ravindra S. Zalaki, MIG/II/28, Adarsh Nagar, Bijapur.
4.	Sri S.M. Aloor, House No.51, Vidya Nagar, BLDE Road, Bijapur.
5.	Miss. Sunanda D/o Rudragouda Patil, C/o S.M. Patil, Advocate, Azad Road, Bijapur.
6.	Sri R.S. Pattanashetty, Ashram Road, Gumaste Colony, Bijapur.
7.	Sri R.L. Ingaleshwar, Navaraspur Badavane, Opp. District Court, Bijapur.

L. SUBRAMANYA

PR-1344 Prl. District & Sessions Judge, Bijapur.

ಕಾರ್ಮಿಕ ಅಧಿಕಾರಿ ಹಾಗೂ ಕಾರ್ಮಿಕ ನಷ್ಟ ಪರಿಹಾರ ಆಯುಕ್ತರು, ದಕ್ಷಿಣ ಕನ್ನಡ ಉಪವಿಭಾಗ–I

ಬೆಂದೂರ್‌ವೆಲ್, ಕಂಕನಾಡಿ, ಮಂಗಳೂರು–ಇವರ ನ್ಯಾಯಾಲಯ

ಸಂಖ್ಯೆ: ಡಬ್ಲ್ಯೂಸಿಎ/ಸಿಆರ್–27/10ಎಫ್, ದಿನಾಂಕ:31ನೇ ಆಗಸ್ಟ್, 2010

ಅರ್ಜಿದಾರರು: **ವಿರುದ್ಧ** **ಪ್ರತಿವಾದಿಗಳು:**

1) ಶ್ರೀಮತಿ ಶಶಿಕಲ, W/o ದಿ: ಗೋಪಾಲ ಭಂಡಾರಿ,
2) ಕು: ಲಕ್ಷ್ಮಿ D/o ಗೋಪಾಲಭಂಡಾರಿ,
3) ಕು: ಕುಮುದ D/o ಗೋಪಾಲಭಂಡಾರಿ,
4) ಕುಮಾರ್: ಶ್ರವಣ ಕುಮಾರ್, S/o Late ಗೋಪಾಲಭಂಡಾರಿ,
ವಾಸ: ಲಕ್ಷ್ಮಿ ನಿವಾಸ, ಮಂಗಳಪೇಟೆ, P.O.ಕುತ್ತಿತ್ತೂರು,
Via ಕಾಟಿಪಳ್ಳ, ಮಂಗಳೂರು–574149.

ದಿ ಚೀಫ್ ಇಂಜಿನಿಯರ್ (ಸಿವಿಲ್) ನ್ಯೂ ಮಂಗಳೂರು ಪೋರ್ಟ್ ಟ್ರಸ್ಟ್, ಪೋಸ್ಟ್, ಪಣಂಬೂರು, ಮಂಗಳೂರು–575010.

ಅಧಿಸೂಚನೆ

ಅರ್ಜಿದಾರಳಾದ ಶ್ರೀಮತಿ ಶಶಿಕಲ ಇವರು ತಮ್ಮ ಗಂಡನಾದ ಶ್ರೀ ದಿವಂಗತ ಗೋಪಾಲಭಂಡಾರಿ ಇವರು 1ನೇ ಪ್ರತಿವಾದಿಗಳಾದ ನ್ಯೂ ಮಂಗಳೂರು ಪೋರ್ಟ್ ಟ್ರಸ್ಟ್, ಪಣಂಬೂರು, ಈ ಸಂಸ್ಥೆಯಲ್ಲಿ Helper ವಾಟರ್ ಸಪ್ಲೈ ಇವರಲ್ಲಿ ಕೆಲಸಗಾರರಾಗಿದ್ದು ಕೆಲಸದಲ್ಲಿ ನಿರತರಾಗಿದ್ದಾಗ, ದಿನಾಂಕ:06.09.1998 ರಂದು ಅಪಘಾತಕ್ಕೀಡಾಗಿ ಮೃತರಾದರೆಂದು ಹೇಳಿ ಆಶ್ರಿತರಾದ ತಮಗೆ ಪ್ರತಿವಾದಿಯವರಿಂದ ಪರಿಹಾರವನ್ನು ಕೊಡಿಸಿ ಕೊಡಬೇಕೆಂದು ಈ ನ್ಯಾಯಾಲಯಕ್ಕೆ ಅರ್ಜಿಯನ್ನು ಸಲ್ಲಿಸಿರುತ್ತಾರೆ.

ಆದ್ದರಿಂದ ಈ ವಿಷಯದಲ್ಲಿ ಈ ಅರ್ಜಿದಾರರಲ್ಲದೆ ಬೇರೆ ಯಾರಾದರೂ ಅರ್ಜಿದಾರರಾಗಿದ್ದು, ಅವರ ಅರ್ಜಿ ಅಥವಾ ತಕರಾರು ಏನಾದರೂ ಇದ್ದಲ್ಲಿ ಮತ್ತು ಈ ಅರ್ಜಿಗೆ ಸಂಬಂಧಿಸಿ ಇನ್ನಿತರ ಯಾವುದೇ ರೀತಿಯ ತಕರಾರು ಇದ್ದರೆ ಈ ಅಧಿಸೂಚನೆ ಸರ್ಕಾರಿ ರಾಜ್ಯ ಪತ್ರದಲ್ಲಿ ಪ್ರಕಟಣೆಯಾದಲ್ಲಿನಿಂದ 30 ದಿನಗಳೊಳಗೆ ಈ ನ್ಯಾಯಾಲಯಕ್ಕೆ ಸಲ್ಲಿಸಲು ಈ ಮೂಲಕ ತಿಳಿಸಲಾಗಿದೆ. ಈ ನಿಗದಿತ ಸಮಯದಲ್ಲಿ ಈ ನ್ಯಾಯಾಲಯವು ಯಾವ ಕ್ಲೈಮು ಅರ್ಜಿ/ ತಕರಾರು ಅರ್ಜಿ ಸ್ವೀಕರಿಸದಿದ್ದಲ್ಲಿ ಈ ನ್ಯಾಯಾಲಯವು ಮುಂದಿನ ಕ್ರಮವನ್ನು ಜರುಗಿಸಲಾಗುವುದೆಂದು ತಿಳಿಸಲಾಗಿದೆ.

ಡಿ.ಜಿ. ನಾಗೇಶ

ಪಿ.ಆರ್.1379 ಕಾರ್ಮಿಕ ಅಧಿಕಾರಿ ಹಾಗೂ ಕಾರ್ಮಿಕ ನಷ್ಟ ಪರಿಹಾರ ಆಯುಕ್ತರು, ದಕ್ಷಿಣ ಕನ್ನಡ ಉಪವಿಭಾಗ– I, ಮಂಗಳೂರು.

ಕಾರ್ಮಿಕ ಅಧಿಕಾರಿ ಹಾಗೂ ಕಾರ್ಮಿಕ ನಷ್ಟ ಪರಿಹಾರ ಆಯುಕ್ತರು, ದಕ್ಷಿಣ ಕನ್ನಡ ಉಪವಿಭಾಗ–I

ಬೆಂದೂರ್‌ವೆಲ್, ಕಂಕನಾಡಿ, ಮಂಗಳೂರು–ಇವರ ನ್ಯಾಯಾಲಯ

ಸಂಖ್ಯೆ: ಡಬ್ಲ್ಯೂಸಿಎ/ಸಿಆರ್–30/10ಎಫ್, ದಿನಾಂಕ:1ನೇ ಸೆಪ್ಟೆಂಬರ್, 2010

ಅರ್ಜಿದಾರರು: **ವಿರುದ್ಧ** **ಪ್ರತಿವಾದಿಗಳು:**

ಶ್ರೀಮತಿ ಯಶೋದ, L ಕೊಟ್ಯಾನ್,
W/o ಲೇಟ್ ಲಕ್ಷ್ಮಣ ಕೊಟ್ಯಾನ್, ವರ್ಷ 51.
ವಾಸ: ಯಶೋದ ನಿಲಯ, ಪೋಸ್ಟ್ ಕುಳ್ಯಾ, ಹೊಸಬೆಟ್ಟು,
ಮಂಗಳೂರು.

1) ಮೋತಿಶಾಂ (ಪ್ರೈ) ಲಿ., ಎಂಪೈರ್ ಮಾಲ್ ಎಂ.ಜಿ.ರೋಡ್, ಮಂಗಳೂರು–3.

2) ಶ್ರೀ ಸುಬ್ಬಣ್ಣ ಶೆಟ್ಟಿ ಪ್ರೊ: ಅಕ್ಷಯಪವರ್ ಸರ್ವಿಸ್ & ಎಲೆಕ್ಟ್ರಿಕಲ್ ಕಂಟ್ರಾಕ್ಟರ್, ಪ್ರಿಸಿಡಿಯಂ ಕಮರ್ಶಿಯಲ್ ಕಾಂಪ್ಲೆಕ್ಸ್, 1ನೇ ಮಹಡಿ, ಎನ್.ಜಿ. ರೋಡ್, ಅತ್ತಾವರ, ಮಂಗಳೂರು.

3) ಶ್ರೀ ಎಂ.ಎಫ್. ಕ್ರಾಸ್ತಾ, ಪ್ರೊ: ಮಿಲೀನ ಎಲೆಕ್ಟ್ರಿಕಲ್, 1ನೇ ಮಹಡಿ, ಕೆಎಸ್ಐಎ ಬಿಲ್ಡಿಂಗ್ ಇಂಡಸ್ಟ್ರಿಯಲ್ ಎಸ್ಟೇಟ್, ಬೈತವಾಡಿ.

4) ದಿ ನ್ಯೂ ಇಂಡಿಯಾ ಅಶ್ಯೂರೆನ್ಸ್ ಕಂ.ಲಿ., 2ನೇ ಮಹಡಿ, ರಾಮಭವನ ಕಾಂಪ್ಲೆಕ್ಸ್, ಕೊಡಿಯಾಲ್ ಬೈಲ್, ಮಂಗಳೂರು.

ಅಧಿಸೂಚನೆ

ಅರ್ಜಿದಾರಳಾದ ಶ್ರೀಮತಿ ಯಶೋದ L ಕೊಟ್ಯಾನ್ ಇವರು ತಮ್ಮ ಮಗನಾದ ಶ್ರೀ ದಿವಂಗತ ರೋಶನ್ ಇವರು 1 & 2 & 3ನೇ ಪ್ರತಿವಾದಿಗಳಾದ (1) ಮೊತಿಶಾಂ ಪ್ರೈ.ಲಿ., ಎಂ.ಜಿ.ರೋಡ್, ಮಂಗಳೂರು, (2) ಪ್ರೊ ಅಕ್ಷಯ ಪವರ್ ಸರ್ವಿಸ್ ಎಲೆಕ್ಟ್ರಿಕಲ್ ಕಂಟ್ರಾಕ್ಟರ್, (3) ಎಂ.ಎಫ್. ಕ್ರಾಸ್ತಾ ಪ್ರೊ: ಮಿಲೀನ ಎಲೆಕ್ಟ್ರಿಕಲ್ಸ್ ಈ ಸಂಸ್ಥೆಯಲ್ಲಿ ಎಲೆಕ್ಟ್ರಿಕಲ್ ವರ್ಕ್ ಇವರಲ್ಲಿ ಕೆಲಸಗಾರರಾಗಿದ್ದು ಕೆಲಸದಲ್ಲಿ ನಿರತರಾಗಿದ್ದಾಗ, ದಿನಾಂಕ:21.11.2009 ರಂದು ಅಪಘಾತಕ್ಕೀಡಾಗಿ ಮೃತರಾದರೆಂದು ಹೇಳಿ ಆಶ್ರಿತರಾದ ತಮಗೆ ಪ್ರತಿವಾದಿಯವರಿಂದ ಪರಿಹಾರವನ್ನು ಕೊಡಿಸಿ ಕೊಡಬೇಕೆಂದು ಈ ನ್ಯಾಯಾಲಯಕ್ಕೆ ಅರ್ಜಿಯನ್ನು ಸಲ್ಲಿಸಿರುತ್ತಾರೆ.

ಆದ್ದರಿಂದ ಈ ವಿಷಯದಲ್ಲಿ ಈ ಅರ್ಜಿದಾರರಲ್ಲದೆ ಬೇರೆ ಯಾರಾದರೂ ಅರ್ಜಿದಾರರಾಗಿದ್ದು, ಅವರ ಅರ್ಜಿ ಅಥವಾ ತಕರಾರು ಏನಾದರೂ ಇದ್ದಲ್ಲಿ ಮತ್ತು ಈ ಅರ್ಜಿಗೆ ಸಂಬಂಧಿಸಿ ಇನ್ನಿತರ ಯಾವುದೇ ರೀತಿಯ ತಕರಾರು ಇದ್ದರೆ ಈ ಅಧಿಸೂಚನೆ ಸರ್ಕಾರಿ ರಾಜ್ಯ ಪತ್ರದಲ್ಲಿ ಪ್ರಕಟಣೆಯಾದಲ್ಲಿನಿಂದ 30 ದಿನಗಳೊಳಗೆ ಈ ನ್ಯಾಯಾಲಯಕ್ಕೆ ಸಲ್ಲಿಸಲು ಈ ಮೂಲಕ ತಿಳಿಸಲಾಗಿದೆ. ಈ ನಿಗದಿತ ಸಮಯದಲ್ಲಿ ಈ ನ್ಯಾಯಾಲಯವು ಯಾವ ಕ್ಲೈಮು ಅರ್ಜಿ/ ತಕರಾರು ಅರ್ಜಿ ಸ್ವೀಕರಿಸದಿದ್ದಲ್ಲಿ ಈ ನ್ಯಾಯಾಲಯವು ಮುಂದಿನ ಕ್ರಮವನ್ನು ಜರುಗಿಸಲಾಗುವುದೆಂದು ತಿಳಿಸಲಾಗಿದೆ.

ಡಿ.ಜಿ. ನಾಗೇಶ

ಪಿ.ಆರ್.1380

ಕಾರ್ಮಿಕ ಅಧಿಕಾರಿ ಹಾಗೂ ಕಾರ್ಮಿಕ ನಷ್ಟ ಪರಿಹಾರ
ಆಯುಕ್ತರು, ದಕ್ಷಿಣ ಕನ್ನಡ ಉಪವಿಭಾಗ– **I**, ಮಂಗಳೂರು.

ಸಹಾಯಕ ಕಾರ್ಮಿಕ ಆಯುಕ್ತರು ಹಾಗೂ ಉಪಧನ ಪಾವತಿ ಕಾಯ್ದೆಯಡಿ ನಿಯಂತ್ರಣಾಧಿಕಾರಿಯವರ ನ್ಯಾಯಾಲಯ, ವಿಭಾಗ–4, ಬೆಂಗಳೂರು

ಸಂಖ್ಯೆ: ಎಎಲ್‌ಸಿ–4/ಪಿಜಿಎ/ಎಸ್.ಆರ್–279/2006–07

ಅರ್ಜಿದಾರರು:

1) ಶ್ರೀಮತಿ ಪಾರ್ವತಿಬಾಯಿ ಕೋಂ ಲೇಟ್ ಬಿ.ಚಂದ್ರಸಿಂಗ್
2) ಶ್ರೀ ಆನಂದ ಸಿಂಗ್ ಬಿನ್ ಲೇಟ್ ಚಂದ್ರಸಿಂಗ್
3) ಶ್ರೀಮತಿ ನಿರ್ಮಲ ಸಿಂಗ್ ಬಿನ್ ಲೇಟ್ ಚಂದ್ರಸಿಂಗ್
4) ಶ್ರೀ ರಮೇಶ್ ಸಿಂಗ್ ಬಿನ್ ಲೇಟ್ ಚಂದ್ರಸಿಂಗ್
5) ಶ್ರೀ ವಸಂತ್ ಸಿಂಗ್ ಬಿನ್ ಲೇಟ್ ಚಂದ್ರಸಿಂಗ್
6) ಶ್ರೀ ತುಳಸೀರಾಂ ಸಿಂಗ್ ಬಿನ್ ಲೇಟ್ ಚಂದ್ರಸಿಂಗ್
ನಂ.305, ದೊಡ್ಡಗೊಲ್ಲರಹಳ್ಳಿ, ಪೈಪ್ ಲೈನ್ ರಸ್ತೆ, ವಿಶ್ವನೀಡಂ ಅಂಚೆ, ಬೆಂಗಳೂರು–560 091.

ವಿರುದ್ಧ

ಪ್ರತಿವಾದಿಗಳು:

ವ್ಯವಸ್ಥಾಪಕ ನಿರ್ದೇಶಕರು, ಬಿ.ಎಂ.ಟಿ.ಸಿ. ಬೆಂಗಳೂರು ಕೇಂದ್ರ ಕಛೇರಿಗಳು ಕೆ.ಹೆಚ್. ರಸ್ತೆ, ಶಾಂತಿನಗರ, ಬೆಂಗಳೂರು–27.

ಪ್ರಕಟಣೆ

ಸಾರ್ವಜನಿಕರಿಗೆ ಹಾಗೂ ಸಂಬಂಧಪಟ್ಟವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಅರ್ಜಿದಾರರು ಈ ನ್ಯಾಯಾಲಯದಲ್ಲಿ ದಿನಾಂಕ:07.02.2007ರಂದು ಉಪಧನ ಪಾವತಿ ಕಾಯ್ದೆಯಡಿಯಲ್ಲಿ ಅರ್ಜಿಯನ್ನು ಸಲ್ಲಿಸಿ, ಅರ್ಜಿಯಲ್ಲಿ ಅವರ ಪತಿ ಬಿ. ಚಂದ್ರ ಸಿಂಗ್, ಇವರು ಪ್ರತಿವಾದಿ ಸಂಸ್ಥೆಯಲ್ಲಿ 28 ವರ್ಷಗಳ ಸೇವೆ ಸಲ್ಲಿಸಿ ದಿನಾಂಕ:30.04.1996 ರಂದು ಸೇವೆಯಿಂದ ನಿವೃತ್ತರಾಗಿ ತದನಂತರ, ದಿನಾಂಕ:30.11.2005 ರಂದು ಮರಣ ಹೊಂದಿರುತ್ತಾರೆಂದು ತಿಳಿಸಿ, ಪ್ರತಿವಾದಿಗಳಿಂದ ಕಾನೂನು ರೀತ್ಯ ಬರಬೇಕಾದ ಉಪಧನವನ್ನು ಮೃತರ ವಾರಸುದಾರರಾದ ತಮಗೆ ಕೊಡಿಸಿಕೊಡಬೇಕೆಂದು ಕೋರಿರುತ್ತಾರೆ.

ಸದರಿ ದಾವೆಯ ವಿಚಾರಣೆ ನಡೆಯುತ್ತಿದ್ದು, ಈ ಬಗ್ಗೆ ಆದೇಶ ಹೊರಡಿಸಬೇಕಾಗಿರುವುದರಿಂದ ಮೇಲೆ ಸೂಚಿಸಿರುವ ಅರ್ಜಿಯನ್ನು ಹೊರತುಪಡಿಸಿ (ಜೀವಂತ ಸದಸ್ಯರು) ಬೇರೆ ಯಾರಾದರೂ ಸದರಿ ಕಾರ್ಮಿಕರಿಗೆ ಸಂಬಂಧಿಸಿದ ಶಾಸನಬದ್ಧ ವಾರಸುದಾರರು ಎಂದು ಪರಿಗಣಿಸಲು

ಪ್ರಾರ್ಥಿಸುವುದಾದಲ್ಲಿ ಅಂತಹವರು ಈ ಪ್ರಕಟಣೆಯನ್ನು ರಾಜ್ಯಪತ್ರದಲ್ಲಿ ಪ್ರಕಟಿಸಿದ 30 ದಿನಗಳೊಳಗಾಗಿ ಅಂತಹ ಆಕ್ಷೇಪಣೆಗಳನ್ನಾಗಲೀ ಈ ನ್ಯಾಯಾಲಯಕ್ಕೆ ಸಲ್ಲಿಸತಕ್ಕದ್ದೆಂದು ಈ ಮೂಲಕ ಸೂಚಿಸಲಾಗಿದೆ.

ಅವಧಿ ಮೀರಿ ಬಂದ ಅರ್ಜಿಗಳನ್ನು ಮಾನ್ಯ ಮಾಡಲಾಗುವುದಿಲ್ಲ.

ಡಾ: ಶ್ರೀಪಾದ ಎಸ್.ಬಿ.
ಸಹಾಯಕ ಕಾರ್ಮಿಕ ಆಯುಕ್ತರು, ಮತ್ತು ಉಪಧನ
ಪಾವತಿ ಕಾಯ್ದೆಯಡಿ ನಿಯಂತ್ರಣಾಧಿಕಾರಿ,
ವಿಭಾಗ–4, ಬೆಂಗಳೂರು.

ಪಿ.ಆರ್.1369

IN THE COURT OF THE 5TH ADDITIONAL CHIEF METROPOLITAN MAGISTRATE, BANGALORE CITY

Notification No./ 2010, Dated:9th September, 2010

It is hereby notified for the information of the public that the unclaimed properties mentioned under are in the custody of the Kumarswamy Layout Police Station, Bangalore City, as unclaimed shall be confiscated to the Government, and disposed off according to law of not claimed by the owner with proof of ownership within one month from the date of the publication of notification.

Sl. No.	Cr.No. Sec.of Law & PF No.	Type of Vehicle	Vehicle No.	Chasis No.	Engine No.
1.	331/09 U/S 379 IPC PF 92/09	TVS XL	KA-42-E-3518	No	ODIA7192110
2.	331/09 U/S 379 IPC PF 93/09	Bajaj Boxer	KA-12-E-1137	DEFB1E60973	DMMBCE-2510
3.	331/09 U/S 379 IPC PF 93/09	RX-100 Yamaha	No Nil	ILI295631	ILI295631
4.	331/09 U/S 379 IPC PF 93/09	Hero Honda	KA-42-E-7349	05K16F-29703	05K15E-24069
5.	331/09 U/S 379 IPC PF 94/09	Honda Shine	KA-04-EQ-1831	0350086D363CJ4EM	JC36E0003583
6.	331/09 U/S 379 IPC PF 94/09	Honda Activa	KA-03-EP-2368	ME4JF085H48528602	JF08E0543271
7.	331/09 U/S 379 IPC PF 94/09	Hero Honda Splendor	KA-05-EL-4891	00020F08616	00318E09008
8.	351/09 U/S 379 IPC PF 105/09	TVS Victor	KA-05-J-2838	3208F186812	N3208M188137
9.	374/09 U/S 41 C1 (d) r/w 102 Cr.Pc PF 116/09	TVS Apachi	KA-40-J-4672	MD624HE3762K59069	DE3K62058937

Vth Addl. Chief Metropolitan Magistrate,
Bangalore.

PR-1368

PROCEEDINGS OF THE ASSISTANT COMMISSIONER OF COMMERCIAL TAXES (LOCAL VAT OFFICE-045), BDA COMPLEX, INDIRANAGAR, BANGALORE, DATED:30TH AUGUST, 2010

Present: Sri Linganna Gundalli

Sub: Loss of one C form in the case of M/s Puma Sports India Pvt.Ltd., No.500, CMH Road, Indiranagar, Bangalore-38.

Ref: Letter of M/s Puma Sports India Pvt.Ltd., Dated:30.06.2010.

Preamble:

M/s Puma Sports India Pvt.Ltd., No.500, CMH Road, Indiranagar, Bangalore-38 is a registered dealer borne on the files of this office bearing TIN No.29020458326. The dealer in his letter cited at reference above has intimated that one C form bearing No.KA-CA-180270 amounting to Rs.27,00,465=00 which was issued to M/s Spenta International Ltd., No.86 & 87, Empire Building, 2nd Floor, Dr. D.N.Road, Mumbai-400001 was lost in the custody of selling dealer i.e. M/s Spenta International Ltd., Mumbai.

Accordingly, the selling dealer M/s spenta international Mumbai filed police complaint to the jurisdictional police officer, executed indemnity bond in Form G in favour of Government as laid down under Rule 12(2) and 12(9) of CST Act 1956 and also

produced paper cuttings for having published in two local papers and requested this office to issue duplicate C form and also to be treated the above lost C form to be invalid. Hence this order.

ORDER NO.ACCT/LVO-045/CR/ /2010-2011, DATED: 30th August, 2010

In view of the circumstances as explained above, the said C form bearing No.KA-CA-180270 amounting to Rs.27.00,465=00 issued to M/s Spenta International Ltd., Mumbai-01 by M/s Puma Sports India Pvt. Ltd., Bangalore has been treated as invalid with immediate effect.

Asst. Commissioner of Commercial Taxes,
Local Vat Office-045, BDA Complex,
Indiranagar, Bangalore-560 038.

OFFICE OF THE ACCT, LVO-045, BANGALORE

NOTIFICATION

Notified Authority under Rule 6(i) of the CST (Karnataka) Rules, 1957

By virtue of the provisions of Rule 12(2) of the CST (R & T) Rules 1957, it is hereby notified for general information that the declarations in Form C shown below is declared to be lost in the custody of selling dealer and also to be invalid.

Sl. No.	Number (including code No.) of declaration forms lost/ destroyed/ stolen	Name and address of the dealer to whom declaration forms is/are issued by the department with date of C form issued	Registration certificate No. of the dealer under CST Act 1956	The address of the dealer to whom the declaration is/ are sent	Date of issue of forms by the dealer	Whether lost/ stolen/ destroyed	Remarks
	KA-CA-180270	M/s Puma Sports India Pvt.Ltd., No.500, CMH Road, Indiranagar, Bangalore-38	29020458326	M/s Spenta International Ltd., No.86 & 87, Empire Building, Dr.D.N.Road, Mumbai-400001.	30.06.09	Lost	Rs.2700465

Asst. Commissioner of Commercial Taxes,
Local Vat Office-045, BDA Complex,
Indiranagar, Bangalore-560 038.

PR-1381

ಕಾರ್ಮಿಕ ನಷ್ಟ ಪರಿಹಾರ ಆಯುಕ್ತರ ನ್ಯಾಯಾಲಯ, ಉಪವಿಭಾಗ-4, ಕಾರ್ಮಿಕ ಭವನ, ಬನ್ನೇರುಘಟ್ಟ ರಸ್ತೆ, ಬೆಂಗಳೂರು-560 029

ಪ್ರಕರಣ ಸಂಖ್ಯೆ: ಕಾನಪಆ/ಬೆಂ-4/ಮ/ವಿವ-8/2010, ದಿನಾಂಕ:14ನೇ ಸೆಪ್ಟೆಂಬರ್, 2010

ಅರ್ಜಿದಾರರು:

1) ಶ್ರೀಮತಿ ರಿಕ್ತಾ ಕುಂದು ಕೋಂ ಲೇಟ್ ಉತ್ತಮ್‌ಕುಂದು, 27 ವರ್ಷ.

2) ಲಕ್ಷ್ಮಿಕುಂದು, ಲೇಟ್ ಉತ್ತಮ್‌ಕುಂದುರವರ ಮಗಳು, 8 ವರ್ಷ.

3) ರಾಧಾರಾಣಿ ಕುಂದು, ಲೇಟ್ ಉತ್ತಮ್‌ಕುಂದುರವರ ಮಗಳು, 4 ವರ್ಷ.

4) ಚಿಂತಾಮಣಿ ಕುಂದು ಲೇಟ್ ಉತ್ತಮ್‌ಕುಂದುರವರ ಮಗಳು 1 ವರ್ಷ.

5) ಶ್ರೀಮತಿ ಮಂಜುಕುಂದು ಕೋಂ ಮನೋರಂಜನ್‌ಕುಂದು, 70 ವರ್ಷ.

ವಾಸ: ಗೋಪಿಬಲ್ಲವಪುರ್ ಗ್ರಾಮ ಮತ್ತು ಅಂಚೆ, ಪಶ್ಚಿಮ್ ಮಿಡಿನಿಪುರ್-721506, ಪಶ್ಚಿಮ ಬಂಗಾಳ.

ವಿರುದ್ಧ

ಪ್ರತಿವಾದಿಗಳು:

1) ಮೆ: ಎಫ್.ಪಿ.ಸಿ.ಸಿ. ಲಿ., 6/ಬಿ, 6ನೇ ಮಹಡಿ, ಸ್ಟರ್ಲಿಂಗ್ ಸೆಂಟರ್, ಡಾ: ಅನ್ನಿಬೆಸೆಂಟ್ ರಸ್ತೆ, ವರ್ಲಿ, ಮುಂಬೈ-400018.

2) ಮೆ: ಓರಿಯಂಟಲ್ ಇನ್ಸೂರೆನ್ಸ್ ಕಂ.ಲಿ., ರೀಜನಲ್ ಆಫೀಸ್, ಟಿಪಿ-ಹೆಚ್‌ಯುಬಿ- ಬೆಂಗಳೂರು, 44/45, ರೆಸಿಡೆನ್ಸಿ ರಸ್ತೆ, ಲಿಯೋ ಶಾಪಿಂಗ್ ಕಾಂಪ್ಲೆಕ್ಸ್, ಬೆಂಗಳೂರು-25.

ಪ್ರಕಟಣೆ

ಅರ್ಜಿದಾರರಾದ ಶ್ರೀಮತಿ ರಿಕ್ತಾ ಕುಂದು ಮತ್ತು ಇತರೆ 4 ಜನ ಈ ನ್ಯಾಯಾಲಯಕ್ಕೆ ಅರ್ಜಿಯೊಂದನ್ನು ಸಲ್ಲಿಸಿ, ತಮ್ಮ ಪತಿ ದಿವಂಗತ ಉತ್ತಮ್‌ಕುಂದು ಇವರು 1ನೇ ಪ್ರತಿವಾದಿ ಬಳಿ ಕೆಲಸ ನಿರ್ವಹಿಸುತ್ತಿದ್ದಾಗ ಅಪಘಾತ ಹೊಂದಿ ಮೃತ ಪಟ್ಟಿರುತ್ತಾನೆಂದು ತಿಳಿಸಿರುತ್ತಾರೆ. ಅಲ್ಲದೆ ತಾವು ಮೃತನ ಅವಲಂಬಿತರಾದ್ದರಿಂದ ತಮಗೆ ಕಾಯ್ದೆಯನ್ವಯ ಪರಿಹಾರದ ಹಣವನ್ನು ಕೊಡಿಸಿಕೊಡಬೇಕೆಂದು ಈ ನ್ಯಾಯಾಲಯವನ್ನು ಕೋರಿರುತ್ತಾರೆ.

ಆದ್ದರಿಂದ ಸಾರ್ವಜನಿಕರಿಗೆ ಮತ್ತು ಸಂಬಂಧಪಟ್ಟವರಿಗೆ ಈ ಮೂಲಕ ತಿಳಿಸುವುದೇನೆಂದರೆ ಈ ಬಗ್ಗೆ ಏನಾದರೂ ಆಕ್ಷೇಪಣೆಗಳಿದ್ದರೆ ಹಾಗೂ ಅರ್ಜಿದಾರರಲ್ಲದೆ ತಾವೇನಾದರೂ ಮೃತನ ನಿಜವಾದ ಅವಲಂಬಿತರು ಎಂದು ಪರಿಗಣಿಸಬೇಕೆಂದು ಕೇಳಿಕೊಳ್ಳುವುದಾದರೆ ಅಂತಹವರು ಈ ಪ್ರಕಟಣೆ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟವಾದ 30 ದಿನದೊಳಗಾಗಿ ತಮ್ಮ ಆಕ್ಷೇಪಣೆ ಅಥವಾ ಅರ್ಜಿಗಳಾಗಲೀ ಬಾರದೇ ಇದ್ದಲ್ಲಿ ಮೇಲ್ಕಂಡ ಅರ್ಜಿದಾರರ ಕ್ಲೈಮ್ ಅರ್ಜಿಯ ಬಗ್ಗೆ ಮುಂದಿನ ಕ್ರಮ ಜರುಗಿಸಲಾಗುವುದು. ತದನಂತರ ಬಂದ ಆಕ್ಷೇಪಣೆ ಅಥವಾ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.

ಸೋಮಣ್ಣ

ಪಿ.ಆರ್.1383

ಕಾರ್ಮಿಕ ನಷ್ಟ ಪರಿಹಾರ ಆಯುಕ್ತರು,
ಉಪವಿಭಾಗ–4, ಬೆಂಗಳೂರು.

ಕಾರ್ಮಿಕ ಅಧಿಕಾರಿ ಮತ್ತು ಕಾರ್ಮಿಕ ನಷ್ಟ ಪರಿಹಾರ ಆಯುಕ್ತರ ನ್ಯಾಯಾಲಯದಲ್ಲಿ, ಕೋಲಾರ

ಪ್ರಕರಣ ಸಂಖ್ಯೆ: ಡಬ್ಲ್ಯೂ.ಸಿ.ಎ:ಎಫ್.ಸಿ–09/10

ಅರ್ಜಿದಾರರು:		ಪ್ರತಿವಾದಿಗಳು:
1) Smt. Ajimaa Bee W/o Late Hafizulla Baig 2) Sri Ikramulla Baig S/o Late Anifullah Baig 3) Sree Ziathulla Baig S/o Late Anifulla, R/o C/o Rahman Thulla Baig, 3rd Cross, Rahmathnagar, Kolar Town.	V/s	1) Mr. V. Shahanshaw S/o Goftarsab, R/o # 28/103-2, Rangani palli Road, Katha pet Punganur Town, AP-517001. 2) The New India Assurance Co.Ltd., Branch Office, 2nd Floor, Bagalur Mansion Doddapet, Kolar-563101.

ಅಧಿಸೂಚನೆ

ಅರ್ಜಿದಾರರಾದ Smt. Ajimaa Bee ಅವರು ತಮ್ಮ ಮಗ Anifulla ಅವರು 1ನೇ ಪ್ರತಿವಾದಿ Mr. V. Shahanshaw ರವರ ಬಳಿ ಚಾಲಕ: ಆಗಿದ್ದು, ಕರ್ತವ್ಯ ನಿರತನಾಗಿದ್ದಾಗ ದಿನಾಂಕ:31.08.2009 ರಂದು ಅಪಘಾತಕ್ಕೀಡಾಗಿ ಮರಣ ಹೊಂದಿರುತ್ತಾರೆಂದು ತಿಳಿಸಿ, ಮೃತನ ಅವಲಂಬಿತರಾದ ಅವರಿಗೆ ಪರಿಹಾರವನ್ನು ಕೊಡಿಸಿಕೊಡಬೇಕೆಂದು ಈ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿರುತ್ತಾರೆ.

ಆದ್ದರಿಂದ ಈ ವಿಷಯದಲ್ಲಿ ಈ ಅರ್ಜಿದಾರರಲ್ಲದೆ ಬೇರೆ ಯಾರಾದರೂ ಅರ್ಜಿದಾರರಿದ್ದು ಅವರ ಅರ್ಜಿ ಅಥವಾ ತಕರಾರು ಏನಾದರೂ ಇದ್ದರೆ ಮತ್ತು ಈ ಅರ್ಜಿಗೆ ಸಂಬಂಧಿಸಿ ಇನ್ನಿತರೆ ಯಾವುದೇ ರೀತಿಯ ತಕರಾರು ಇದ್ದರೆ ಈ ಅಧಿಸೂಚನೆ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಣೆಯಾದ ದಿನದಿಂದ 30 ದಿನಗಳ ಒಳಗಾಗಿ ಈ ನ್ಯಾಯಾಲಯಕ್ಕೆ ಸಲ್ಲಿಸಲು ಈ ಮೂಲಕ ತಿಳಿಸಲಾಗಿದೆ. ಈ ನಿಗದಿತ ಸಮಯದಲ್ಲಿ ಈ ನ್ಯಾಯಾಲಯವು ಯಾವ ಕ್ಲೈಂ ಅರ್ಜಿ: ತಕರಾರು ಅರ್ಜಿ ಸ್ವೀಕರಿಸದಿದ್ದಲ್ಲಿ ಈ ನ್ಯಾಯಾಲಯವು ಮುಂದಿನ ಕ್ರಮ ಜರುಗಿಸಲಾಗುತ್ತದೆಂದು ತಿಳಿಸಲಾಗಿದೆ.

ಈ ಅಧಿಸೂಚನೆಯನ್ನು ನನ್ನ ಹಸ್ತಾಕ್ಷರ ಹಾಗೂ ಈ ನ್ಯಾಯಾಲಯದ ಮೊಹರಿನೊಂದಿಗೆ ಇದೇ ದಿನಾಂಕ:14.09.2010 ರಂದು ನೀಡಲಾಗಿದೆ.

ಎಸ್. ರೇವಣ್ಣ

ಕಾರ್ಮಿಕ ಅಧಿಕಾರಿ ಮತ್ತು ಕಾರ್ಮಿಕ
ನಷ್ಟ ಪರಿಹಾರ ಆಯುಕ್ತರು, ಕೋಲಾರ
ಉಪ ವಿಭಾಗ, ಕೋಲಾರ.

ಪಿ.ಆರ್.1384

ಸಹಾಯಕ ಕಾರ್ಮಿಕ ಆಯುಕ್ತರು ಹಾಗೂ ಉಪಧನ ಪಾವತಿ ಪ್ರಾಧಿಕಾರಿಯವರ ನ್ಯಾಯಾಲಯ, ಬೆಂಗಳೂರು ವಿಭಾಗ–3, ಕಾರ್ಮಿಕ ಭವನ, ಬನ್ನೇರುಘಟ್ಟ ರಸ್ತೆ, ಬೆಂಗಳೂರು–560 029

ಪ್ರಕರಣ ಸಂಖ್ಯೆ: ಸಕಾಆಬೆಂ–3/ಪಿಜಿಎ/ಸಿಆರ್–13/08–09, ದಿನಾಂಕ:1ನೇ ಸೆಪ್ಟೆಂಬರ್, 2010

ಉಪಸ್ಥಿತರು:

ಬಾಲಕೃಷ್ಣ ಸಿ.ಹೆಚ್.

ಸಹಾಯಕ ಕಾರ್ಮಿಕ ಆಯುಕ್ತರು ಹಾಗೂ ಉಪಧನ ಪಾವತಿ ಕಾಯ್ದೆ 1972ರಡಿ ನಿಯಂತ್ರಣಾಧಿಕಾರಿ, ಬೆಂಗಳೂರು ವಿಭಾಗ–3, ಬೆಂಗಳೂರು

ಅರ್ಜಿದಾರರು:	ಪ್ರತಿವಾದಿಗಳು:
ಶ್ರೀ ದೇವಪುತ್ರ ಬಿನ್ ಲೇಟ್ ಜೆ. ಇಸಾಕ್ ಜಕಾಬೋ. ನಂ.873, ಇಸಾಕ್ ಕಾಂಪೌಂಡ್, ಗುಲ್ಪೇಟ್, ಕೋಲಾರ ಜಿಲ್ಲೆ.	ದಿ ಮ್ಯಾನೇಜಿಂಗ್ ಡೈರೆಕ್ಟರ್, ಬಿ.ಎಂ.ಟಿ.ಸಿ. ಸೆಂಟ್ರಲ್ ಆಫೀಸ್, ಕೆ.ಹೆಚ್. ರೋಡ್, ಶಾಂತಿನಗರ, ಬೆಂಗಳೂರು–27.

ಪ್ರಕಟಣೆ

ಸಾರ್ವಜನಿಕರಿಗೆ ಹಾಗೂ ಸಂಬಂಧಪಟ್ಟವರಿಗೆ ಈ ಮೂಲಕ ತಿಳಿಸುವುದೇನೆಂದರೆ, ಮೇಲ್ಕಂಡ ಅರ್ಜಿದಾರರು ಈ ನ್ಯಾಯಾಲಯದಲ್ಲಿ ದಿನಾಂಕ:11.08.2008 ರಂದು ಅರ್ಜಿ ಸಲ್ಲಿಸಿ, ಅವರ ಪತಿ ದಿನಾಂಕ:08.08.2009 ರಂದು ಮರಣ ಹೊಂದಿದರೆಂದು ತಿಳಿಸುತ್ತಾ, ಅವರ ಪತಿ ಲೇಟ್ ಶ್ರೀ ದೇವಪುತ್ರ ಇವರು ಪ್ರತಿವಾದಿ ಸಂಸ್ಥೆಯಲ್ಲಿ ಸಲ್ಲಿಸಿರುವ 22 ವರ್ಷಗಳ ಸೇವೆಗೆ ಪ್ರತಿವಾದಿಗಳಿಂದ ಉಪಧನ ಮೊತ್ತ ರೂ.28,206/– ಗಳನ್ನು ಕೊಡಿಸಿಕೊಡಬೇಕೆಂದು ಕೋರಿರುತ್ತಾರೆ.

ಸದರಿ ಪ್ರಕರಣದಲ್ಲಿ, ಮೇಲೆ ಸೂಚಿಸಿರುವ ಅರ್ಜಿದಾರರ ಅರ್ಜಿಯನ್ನು ಹೊರತುಪಡಿಸಿ (ಜೀವಂತ ಸದಸ್ಯರು) ಬೇರೆ ಯಾರಾದರೂ ಸದರಿ ಕಾರ್ಮಿಕರಿಗೆ ಸಂಬಂಧಿಸಿದ ಶಾಸನಬದ್ಧ ವಾರಸುದಾರರು ಎಂದು ಪರಿಗಣಿಸಲು ಪ್ರಾರ್ಥಿಸುವುದಾದಲ್ಲಿ ಅಂತಹವರು ಈ ಪ್ರಕಟಣೆಯನ್ನು ರಾಜ್ಯಪತ್ರದಲ್ಲಿ ಪ್ರಕಟಿಸಿದ 30 ದಿನದೊಳಗಾಗಿ ಅಂತಹ ಆಕ್ಷೇಪಣೆಗಳನ್ನು ಈ ನ್ಯಾಯಾಲಯಕ್ಕೆ ಸಲ್ಲಿಸತಕ್ಕದ್ದೆಂದು ಈ ಮೂಲಕ ಸೂಚಿಸಲಾಗಿದೆ.

ಅವಧಿ ಮೀರಿ ಬಂದ ಅರ್ಜಿಗಳನ್ನು ಮಾನ್ಯ ಮಾಡಲಾಗುವುದಿಲ್ಲ.

ಬಾಲಕೃಷ್ಣ ಸಿ.ಹೆಚ್.
ಸಹಾಯಕ ಕಾರ್ಮಿಕ ಆಯುಕ್ತರು ಹಾಗೂ ಉಪಧನ
ಪಾವತಿ ಕಾಯ್ದೆಯಡಿ ನಿಯಂತ್ರಣಾಧಿಕಾರಿಗಳು,
ಬೆಂಗಳೂರು ವಿಭಾಗ–3, ಬೆಂಗಳೂರು.

ಪಿ.ಆರ್.1386

ಕಾರ್ಮಿಕ ಅಧಿಕಾರಿ ಹಾಗೂ ಕಾರ್ಮಿಕ ನಷ್ಟ ಪರಿಹಾರ ಆಯುಕ್ತರ ನ್ಯಾಯಾಲಯ, ಗದಗ ಜಿಲ್ಲೆ, ಗದಗ

ಸಂಖ್ಯೆ: ಕಾಅಗ/ಕಾನಪ/ಎಫ್–50/2010/475, ದಿನಾಂಕ:1ನೇ ಸೆಪ್ಟೆಂಬರ್, 2010

ಅರ್ಜಿದಾರರು: **ವಿರುದ್ಧ**

1) ಶ್ರೀ ಶೇಖರಪ್ಪ ತಂದೆ: ಹನುಮಪ್ಪ ಜೋಗಿನ್,
2) ಶ್ರೀಮತಿ ದೇವಕ್ಕ ಕೋಂ: ಶೇಖರಪ್ಪ ಜೋಗಿನ್,
ಸಾ: ಹಳ್ಳಿಗುಡಿ, ತಾ: ಮುಂಡರಗಿ, ಜಿ:ಗದಗ.

ಪ್ರತಿವಾದಿಗಳು:

1) ಶ್ರೀ ರಾಯಪ್ಪ ಚೆನ್ನಾಳ್ಳಿ, ಲೀಗಲ್ ರಿಪ್ರೆಸಂಟೇಟಿವ್–ಬಸವರಾಜ್ ತಂದೆ: ರಾಯಪ್ಪ ಚೆನ್ನಾಳ್ಳಿ.
2) ಡಿವಿಜನಲ್ ಮ್ಯಾನೇಜರ್ ಯುನೈಟೆಡ್ ಇಂಡಿಯಾ ಇನ್ಸೂರೆನ್ಸ್ ಕಂ.ಲಿ. ಅಂಕೋಲಾ ಆರ್ಕೇಡ್, ಜುಬಿಲಿ ಸರ್ಕಲ್ ಹತ್ತಿರ, ಪಿ.ಬಿ. ರಸ್ತೆ, ಧಾರವಾಡ.
3) ಬ್ರ್ಯಾಂಚ್ ಮ್ಯಾನೇಜರ್, ಯುನೈಟೆಡ್ ಇಂಡಿಯಾ ಇನ್ಸೂರೆನ್ಸ್ ಕಂ.ಲಿ., ರೋಟರಿ ಸರ್ಕಲ್, ಪಾಲಾ ಬಾದಾಮಿ ರಸ್ತೆ, ಗದಗ.

ಪ್ರಕಟಣೆ

ಅರ್ಜಿದಾರರಾದ 1) ಶ್ರೀ ಶೇಖರಪ್ಪ ತಂದೆ: ಹನುಮಪ್ಪ ಜೋಗಿನ್, (2) ಶ್ರೀಮತಿ ದೇವಕ್ಕ ಕೋಂ ಶೇಖರಪ್ಪ ಜೋಗಿನ್ ಇವರು, ತಾವು ಮೃತ ಆನಂದ ತಂದೆ: ಶೇಖರಪ್ಪ ಜೋಗಿನ್ ಇವರ ತಂದೆ ಮತ್ತು ತಾಯಿಯೆಂದು, ಅವರ ಮರಣದಿಂದ ನಷ್ಟ ಪರಿಹಾರ ಕೋರಿ ಈ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಮೃತ ಆನಂದ ತಂದೆ: ಶೇಖರಪ್ಪ ಜೋಗಿನ್ ಇವರು ಒಂದನೇಯ ಪ್ರತಿವಾದಿಗಳಾದ ಶ್ರೀ ರಾಯಪ್ಪ ಚೆನ್ನಾಳ್ಳಿ, ಲೀಗಲ್ ರಿಪ್ರೆಸಂಟೇಟಿವ್–ಬಸವರಾಜ್ ತಂದೆ: ರಾಯಪ್ಪ ಚೆನ್ನಾಳ್ಳಿ, ಇವರಲ್ಲಿ ಕೂಲಿ ಆಗಿ ಕೆಲಸ ನಿರ್ವಹಿಸುತ್ತಿದ್ದಾಗ ಸಂಭವಿಸಿದ ಅಪಘಾತದಲ್ಲಿ ಮರಣ ಹೊಂದಿದರೆಂದು ಸದರಿ ಅರ್ಜಿದಾರರು ತಿಳಿಸಿರುತ್ತಾರೆ. ಈ ಸಂಬಂಧವಾಗಿ ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ಮತ್ತು ಸಂಬಂಧಪಟ್ಟವರಿಗೆ ತಿಳಿಸುವುದೇನೆಂದರೆ, ಈ ಬಗ್ಗೆ ಏನಾದರೂ ಆಕ್ಷೇಪಣೆಗಳಾಗಲೀ ಅಥವಾ ಬೇರೆ ಯಾರಾದರೂ ಮೃತರ ಕಾನೂನು ಬದ್ಧ ಆಶ್ರಿತರೆಂದು ಪರಿಗಣಿಸಬೇಕೆಂದು ಪ್ರಾರ್ಥಿಸುವುದಾದರೆ, ಅಂತಹವರು ಈ ಪ್ರಕಟಣೆಯನ್ನು ಪ್ರಕಟಿಸಿದ 15 ದಿನಗಳ ಒಳಗಾಗಿ ಆಕ್ಷೇಪಣೆಯನ್ನಾಗಲೀ ಅಥವಾ ಅರ್ಜಿಯನ್ನಾಗಲೀ ಈ ನ್ಯಾಯಾಲಯದಲ್ಲಿ ಸಲ್ಲಿಸತಕ್ಕದ್ದು. ಅವಧಿ ಮೀರಿ ಬಂದ ಅರ್ಜಿಗಳನ್ನು ಮಾನ್ಯ ಮಾಡಲಾಗುವುದಿಲ್ಲ.

ಕಾರ್ಮಿಕ ಅಧಿಕಾರಿ ಗದಗ ಜಿಲ್ಲೆ, ಗದಗ
ಹಾಗೂ ಕಾರ್ಮಿಕ ನಷ್ಟ ಪರಿಹಾರ
ಕಾನೂನು ಅಡಿ ಆಯುಕ್ತರು.

ಪಿ.ಆರ್.1356

ಕಾರ್ಮಿಕ ಅಧಿಕಾರಿ ಹಾಗೂ ಕಾರ್ಮಿಕ ನಷ್ಟ ಪರಿಹಾರ ಕಾಯ್ದೆಯಡಿ ಆಯುಕ್ತರು, ಗದಗ ಜಿಲ್ಲೆ, ಗದಗ ಇವರ ನ್ಯಾಯಾಲಯದಲ್ಲಿ

ಸಂಖ್ಯೆ: ಕಾಅಗ/ಕಾನಪ/ಎಫ್–65/10, ದಿನಾಂಕ:1ನೇ ಸೆಪ್ಟೆಂಬರ್, 2010

ಅರ್ಜಿದಾರರು:

1) ಶ್ರೀ ಬಸವರಾಜ ವಿರುಪಾಕ್ಷಪ್ಪ, ಆನಂದಗೇರಿ, 37 ವರ್ಷ.
2) ಕು: ಪಡೆಪ್ಪ ತಂದೆ: ಬಸವರಾಜ ಆನಂದಗೇರಿ, 12 ವರ್ಷ.
3) ಕು: ರಂಗಪ್ಪ ತಂದೆ ಬಸವರಾಜ ಆನಂದಗೇರಿ, 10 ವರ್ಷ,
4) ಕು: ಸಂತೋಷ ತಂದೆ, ಬಸವರಾಜ ಆನಂದಗೇರಿ, 9 ವರ್ಷ
ಇವರೆಲ್ಲರ ವಿಳಾಸ: ಸಾ: ಬೊಮ್ಮಸಾಗರ, ತಾ: ರೋಣ, ಜಿ:ಗದಗ
ಹಾ/ವ: ಶರಣಬಸವೇಶ್ವರನಗರ, ಗದಗ.

ಪ್ರತಿವಾದಿಗಳು:

1) ಓಬಯ್ಯ ಈರಯ್ಯ ಗಣಚಾರಿ, ಸಾ: ಬೆಳಗೋಡ, ತಾ: ರೋಣ, ಜಿ: ಗದಗ.
2) ದಿ ಡಿವಿಜನಲ್ ಮ್ಯಾನೇಜರ್, ನ್ಯೂ ಇಂಡಿಯಾ ಅಶ್ಯೂರೆನ್ಸ್ ಕಂ.ಲಿ., ಎಲ್.ಇ.ಎ. ಕಾಂಪ್ಲೆಕ್ಸ್, ಧಾರವಾಡ.

ಪ್ರಕಟಣೆ

ಅರ್ಜಿದಾರರಾದ ಬಸವರಾಜ ವಿರುಪಾಕ್ಷಪ್ಪ ಆನಂದಗೇರಿ, ಹಾಗೂ ಇತರೆ 03 ಜನ, ಸಾ: ಬೊಮ್ಮಸಾಗರ, ತಾ:ರೋಣ, ಹಾ/ವ:ಶರಣಬಸವೇಶ್ವರ ನಗರ, ಗದಗ, ಇವರು ತಾವು ಮೃತ ಶ್ರೀಮತಿ ಚಂದ್ರವ್ವ ಆನಂದಗೇರಿ ಇವರ ಗಂಡ ಮತ್ತು ಮಕ್ಕಳು ಎಂದೂ, ಅವರ ಮರಣದಿಂದ ನಷ್ಟಪರಿಹಾರ ಕೋರಿ ಈ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಮೃತ ಶ್ರೀಮತಿ ಚಂದ್ರವ್ವ ಆನಂದಗೇರಿ ಇವರು ಒಂದನೇ ಪ್ರತಿವಾದಿಗಳಾದ ಓಬಯ್ಯ ಈರಯ್ಯ ಗಣಚಾರಿ, ಸಾ: ಬೆಳಗೋಡ, ತಾ:ರೋಣ, ಇವರಲ್ಲಿ ಕೂಲಿ ಆಗಿ ಕೆಲಸ ನಿರ್ವಹಿಸುತ್ತಿದ್ದಾಗ ಸಂಭವಿಸಿದ ಅಪಘಾತದಲ್ಲಿ ಮರಣ ಹೊಂದಿದರೆಂದು ಸದರಿ ಅರ್ಜಿದಾರರು ತಿಳಿಸಿರುತ್ತಾರೆ. ಈ ಸಂಬಂಧವಾಗಿ ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ಮತ್ತು ಸಂಬಂಧಪಟ್ಟವರಿಗೆ ತಿಳಿಸುವುದೇನೆಂದರೆ, ಈ ಬಗ್ಗೆ ಏನಾದರೂ ಆಕ್ಷೇಪಣೆಗಳಾಗಲೀ ಅಥವಾ ಬೇರೆ ಯಾರಾದರೂ ಮೃತರ ಕಾನೂನು ಬದ್ಧ ಆಶ್ರಿತರೆಂದು ಪರಿಗಣಿಸಬೇಕೆಂದು ಪ್ರಾರ್ಥಿಸುವುದಾದರೆ, ಅಂತಹವರು ಈ ಪ್ರಕಟಣೆಯನ್ನು ಈ ನ್ಯಾಯಾಲಯದ ನಾಮಫಲಕದಲ್ಲಿ ಪ್ರಕಟಿಸಿದ 30 ದಿನಗಳೊಳಗಾಗಿ ಆಕ್ಷೇಪಣೆಗಳನ್ನಾಗಲೀ ಅಥವಾ ಅರ್ಜಿಯನ್ನಾಗಲೀ ಈ ನ್ಯಾಯಾಲಯದಲ್ಲಿ ಸಲ್ಲಿಸತಕ್ಕದ್ದು. ಅವಧಿ ಮೀರಿ ಬಂದ ಅರ್ಜಿಗಳನ್ನು ಮಾನ್ಯ ಮಾಡಲಾಗುವುದಿಲ್ಲ.

ಎಂ.ಬಿ. ಅನ್ಸಾರಿ

ಪಿ.ಆರ್.1357

ಕಾರ್ಮಿಕ ಅಧಿಕಾರಿ,
ಗದಗ ಜಿಲ್ಲೆ, ಗದಗ ಹಾಗೂ ಕಾರ್ಮಿಕ ನಷ್ಟ
ಪರಿಹಾರ ಕಾನೂನು ಅಡಿ ಆಯುಕ್ತರು.

ಕಾರ್ಮಿಕ ಅಧಿಕಾರಿಗಳು ಹಾಗೂ ಕಾರ್ಮಿಕ ನಷ್ಟ ಪರಿಹಾರ ಆಯುಕ್ತರವರ ನ್ಯಾಯಾಲಯ, ಕೊಪ್ಪಳ ಜಿಲ್ಲೆ, ಕೊಪ್ಪಳ

ಪ್ರಕಟಣೆ

ಸಂಖ್ಯೆ: ಕಾಅಕೊ/ಕಾನಪ/ಮ.ಪ್ರ/ಸಂಖ್ಯೆ–86/2008, ದಿನಾಂಕ:18ನೇ ಫೆಬ್ರವರಿ, 2009

ಅರ್ಜಿದಾರರು:

1) ಶ್ರೀಮತಿ ಸುಶೀಲಮ್ಮ @ ಹುಲಿಗೆಮ್ಮ ಗಂಡ ರಾಮಾಂಜಿನೇಯುಲು,
2) ಶ್ರೀಮತಿ ಹನುಮಂತಮ್ಮ @ ದುರ್ಗಮ್ಮ ಗಂಡ ಲೇಟ್ ಹನುಮಂತಪ್ಪ, ಸಾ:ಹೊಸಳ್ಳಿ ಗ್ರಾಮ, ತಾ:ಜಿ: ಕೊಪ್ಪಳ.

ಪ್ರತಿವಾದಿಗಳು:

1) ಶ್ರೀ ಎ. ಕೋಟೇಶ್ವರ್ ರಾವ್ ತಂದೆ: ಎ. ರಾಮಾಂಜಿನೇಯುಲು, ಲಾರಿ ನಂ.ಕೆಎ–34/8088ರ ಮಾಲೀಕರು, ಅಹಂಭಾವಿ, ಪೋ:ಬಳ್ಳಾರಿ.
2) ದಿ ಡಿವಿಷನಲ್ ಮ್ಯಾನೇಜರ್, ಓರಿಯಂಟಲ್ ಇನ್ಶೂರೆನ್ಸ್, ಬಳ್ಳಾರಿ.

ಸಾರ್ವಜನಿಕರಿಗೆ ಮತ್ತು ಸಂಬಂಧಪಟ್ಟವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಮೃತ ರಾಮಾಂಜಿನೇಯುಲು, ಎಂಬುವವರು ಪ್ರತಿವಾದಿಯವರಲ್ಲಿ ಕೆಲಸ ನಿರ್ವಹಿಸುತ್ತಿರುವಾಗ ದಿನಾಂಕ:07.03.2008ರಂದು ಕೆಲಸದಿಂದುಂಟಾದ ಅಪಘಾತದಿಂದ ಮೃತ: ಹೊಂದಿರುತ್ತಾರೆ, ಎಂದು ವಿವರಿಸುತ್ತಾ ಕಾರ್ಮಿಕ ನಷ್ಟ ಪರಿಹಾರ ಕಾಯ್ದೆ 1923ರ ಅಡಿಯಲ್ಲಿ ಪರಿಹಾರ ಧನ ಕೋರಿ ಅವಲಂಬಿತ ವಾರಸುದಾರರೆಂದು ಹೇಳಿಕೊಂಡು ಮೃತ ರಾಮಾಂಜಿನೇಯುಲು, ಇವರ ವಾರಸುದಾರರಾದ (1) ಶ್ರೀಮತಿ ಸುಶೀಲಮ್ಮ @ ಹುಲಿಗೆಮ್ಮ ಗಂಡ ರಾಮಾಂಜಿನೇಯುಲು, (2) ಶ್ರೀಮತಿ ಹನುಮಂತಮ್ಮ @ ದುರ್ಗಮ್ಮ ಗಂಡ ಲೇಟ್ ಹನುಮಂತಪ್ಪ, ಎಂಬುವವರು ಈ ನ್ಯಾಯಾಲಯಕ್ಕೆ ಅರ್ಜಿಯನ್ನು ಸಲ್ಲಿಸಿರುತ್ತಾರೆ.

ಆದಕಾರಣ ಈ ಬಗ್ಗೆ ಆಕ್ಷೇಪಣೆ ಇದ್ದಲ್ಲಿ ತಾವೇನಾದರೂ ಅಥವಾ ತಾವೂ ಸಹ ಮೃತ ಹೊಂದಿದವರ ನಿಜವಾದ ವಾರಸುದಾರರೆಂದು ಪರಿಗಣಿಸಬೇಕೆಂದು ಕೇಳಿಕೊಳ್ಳುವುದಾದರೆ ಅಂಥವರು ಈ ಪ್ರಕಟಣೆಯನ್ನು ಈ ನ್ಯಾಯಾಲಯದ ಸೂಚನಾ ಫಲಕದಲ್ಲಿ ಪ್ರದರ್ಶಿಸಿದ ಅಥವಾ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಗೊಂಡ ಅಥವಾ ಸ್ಥಳೀಯ ದಿನ ಪತ್ರಿಕೆಯಲ್ಲಿ ಪ್ರಕಟಗೊಂಡ 30 ದಿನಗಳೊಳಗಾಗಿ ಆಕ್ಷೇಪಣೆ ಅಥವಾ ಅರ್ಜಿ ಸಲ್ಲಿಸಬಹುದಾಗಿದೆ ಎಂದು ಮತ್ತು ಸದರಿ ಅವಧಿಯಲ್ಲಿ ಯಾರಿಂದಲೂ ಆಕ್ಷೇಪಣೆ ಅಥವಾ ಅರ್ಜಿ ಬಾರದಿದ್ದಲ್ಲಿ ಸದರಿ ಅವಧಿ ಮುಗಿದ ನಂತರ ಮೇಲ್ಕಾಣಿಸಿದ ಅರ್ಜಿದಾರರ ಅರ್ಜಿಯನ್ನೇ ಮುಂದಿನ ವಿಚಾರಣೆಗಾಗಿ ತೆಗೆದುಕೊಳ್ಳಲಾಗುವುದೆಂದು ಈ ಪ್ರಕಟಣೆ ಮೂಲಕ ತಿಳಿಯಪಡಿಸಲಾಗಿದೆ.

ಕಾರ್ಮಿಕ ನಷ್ಟ ಪರಿಹಾರ ಆಯುಕ್ತರು,
ಕೊಪ್ಪಳ ಜಿಲ್ಲೆ, ಕೊಪ್ಪಳ.

ಪಿ.ಆರ್.1361

ಕಾರ್ಮಿಕ ಅಧಿಕಾರಿಗಳು ಹಾಗೂ ಕಾರ್ಮಿಕ ನಷ್ಟ ಪರಿಹಾರ ಆಯುಕ್ತರವರ ನ್ಯಾಯಾಲಯ, ಕೊಪ್ಪಳ ಜಿಲ್ಲೆ, ಕೊಪ್ಪಳ

ಪ್ರಕಟಣೆ

ಸಂಖ್ಯೆ: ಕಾಅಕೊ/ಕಾನಪ/ಮ.ಪ್ರ/ಸಂಖ್ಯೆ–71/2010, ದಿನಾಂಕ:25ನೇ ಆಗಸ್ಟ್, 2010

ಅರ್ಜಿದಾರರು:

1) ಶ್ರೀಮತಿ ಖಾಸೀಂಬಿ ಗಂಡ ಶಾಮೀದ್‌ಸಾಬ್, 28 ವರ್ಷ.
2) ಮೆಹಬೂಬ್‌ಸಾಬ್ ತಂದೆ ಶಾಮೀದ್‌ಸಾಬ್, 7 ವರ್ಷ.
3) ಶಾಮೀದ್‌ಬಿ ತಂದೆ ಶಾಮೀದ್‌ಸಾಬ್, 6 ವರ್ಷ.
4) ಮೌಲಾಬಿ ಗಂಡ ಮೆಹಬೂಬ್‌ಸಾಬ್, 50 ವರ್ಷ,
ಎಪಿಎಂಸಿ ಹಮಾಲರ ಕಾಲೋನಿ, ಗಂಗಾವತಿ.

ಪ್ರತಿವಾದಿಗಳು:

1) ಹಮೀದ್ ಅಕ್ಬರ್ ತಂದೆ ಶೇಖ್‌ದಾದಾಮಿಯಾ, ಮಾಲೀಕರು, ಲಾರಿ ನಂ.ಕೆಎ–37–2620, ಮನೆ ನಂ.2–3–391, ಶಿವಯ್ಯ ಗದ್ದಿ ಏರಿಯಾ, ಗಂಗಾವತಿ, ಜಿ:ಕೊಪ್ಪಳ.
2) ದಿ ಜನರಲ್ ಮ್ಯಾನೇಜರ್, ಶ್ರೀರಾಮ್ ಜನರಲ್ ಇನ್ಶೂರೆನ್ಸ್ ಕಂಪನಿ ಲಿಮಿಟೆಡ್, ಎ/8 ರಿಕೋ ಇಂಡಸ್ಟ್ರೀಯಲ್ ಏರಿಯಾ ಸೀತಾಪುರ, ಜೈಪುರ, ರಾಜಸ್ಥಾನ್–302022.

ಸಾರ್ವಜನಿಕರಿಗೆ ಮತ್ತು ಸಂಬಂಧಪಟ್ಟವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಮೃತ ಶಾಮೀದ್‌ಸಾಬ್, ಎಂಬುವವರು ಪ್ರತಿವಾದಿಯವರಲ್ಲಿ ಕೆಲಸ ನಿರ್ವಹಿಸುತ್ತಿರುವಾಗ ದಿನಾಂಕ:20.12.2009ರಂದು ಕೆಲಸದಿಂದುಂಟಾದ ಅಪಘಾತದಿಂದ ಮೃತ ಹೊಂದಿರುತ್ತಾರೆ, ಎಂದು ವಿವರಿಸುತ್ತಾ ಕಾರ್ಮಿಕ ನಷ್ಟ ಪರಿಹಾರ ಕಾಯ್ದೆ 1923ರ ಅಡಿಯಲ್ಲಿ ಪರಿಹಾರ ಧನ ಕೋರಿ ಅವಲಂಬಿತ ವಾರಸುದಾರರೆಂದು ಹೇಳಿಕೊಂಡು ಮೃತ ಶಾಮೀದ್‌ಸಾಬ್ ಇವರ ವಾರಸುದಾರರಾದ (1) ಶ್ರೀಮತಿ ಖಾಸೀಂಬಿ ಗಂಡ ಶಾಮೀದ್‌ಸಾಬ್, (2) ಮೆಹಬೂಬ್‌ಸಾಬ್ ತಂದೆ ಶಾಮೀದ್‌ಸಾಬ್, (3) ಶಾಮೀದ್‌ಬಿ ತಂದೆ ಶಾಮೀದ್‌ಸಾಬ್, (4) ಮೌಲಾಬಿ ಗಂಡ ಮೆಹಬೂಬ್‌ಸಾಬ್, ಎಂಬುವವರು ಈ ನ್ಯಾಯಾಲಯಕ್ಕೆ ಅರ್ಜಿಯನ್ನು ಸಲ್ಲಿಸಿರುತ್ತಾರೆ.

ಆದಕಾರಣ ಈ ಬಗ್ಗೆ ಆಕ್ಷೇಪಣೆ ಇದ್ದಲ್ಲಿ ತಾವೇನಾದರೂ ಅಥವಾ ತಾವೂ ಸಹ ಮೃತ ಹೊಂದಿದವರ ನಿಜವಾದ ವಾರಸುದಾರರೆಂದು ಪರಿಗಣಿಸಬೇಕೆಂದು ಕೇಳಿಕೊಳ್ಳುವುದಾದರೆ ಅಂಥವರು ಈ ಪ್ರಕಟಣೆಯನ್ನು ಈ ನ್ಯಾಯಾಲಯದ ಸೂಚನಾ ಫಲಕದಲ್ಲಿ ಪ್ರದರ್ಶಿಸಿದ ಅಥವಾ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಗೊಂಡ ಅಥವಾ ಸ್ಥಳೀಯ ದಿನ ಪತ್ರಿಕೆಯಲ್ಲಿ ಪ್ರಕಟಗೊಂಡ 30 ದಿನಗಳೊಳಗಾಗಿ ಆಕ್ಷೇಪಣೆ ಅಥವಾ ಅರ್ಜಿ ಸಲ್ಲಿಸಬಹುದಾಗಿದೆ ಎಂದು ಮತ್ತು ಸದರಿ ಅವಧಿಯಲ್ಲಿ ಯಾರಿಂದಲೂ ಆಕ್ಷೇಪಣೆ ಅಥವಾ ಅರ್ಜಿ ಬಾರದಿದ್ದಲ್ಲಿ ಸದರಿ ಅವಧಿ ಮುಗಿದ ನಂತರ ಮೇಲ್ಕಾಣಿಸಿದ ಅರ್ಜಿದಾರರ ಅರ್ಜಿಯನ್ನೇ ಮುಂದಿನ ವಿಚಾರಣೆಗಾಗಿ ತೆಗೆದುಕೊಳ್ಳಲಾಗುವುದೆಂದು ಈ ಪ್ರಕಟಣೆ ಮೂಲಕ ತಿಳಿಯಪಡಿಸಲಾಗಿದೆ.

ಕಾರ್ಮಿಕ ನಷ್ಟ ಪರಿಹಾರ ಆಯುಕ್ತರು,
ಕೊಪ್ಪಳ ಜಿಲ್ಲೆ, ಕೊಪ್ಪಳ.

ಪಿ.ಆರ್.1314

Form No.151

(See rule 315)

Member's voluntary winding up

Notice of appointment of liquidator pursuant to Sec.516

Name of the Company: Gandhicity Hitek R & D Private Limited

Nature of Business: Development of SEZ

Addrees of the Regd Office: No.513, 10TH CROSS, RMV EXTENSION, SADASHIVA NAGAR, BANGALORE – 560 080.

Name and address of the Liquidator: Ravindra. V. Joshi, Practising Company Secretary 10-B/301, Alica Nagar, Lokhandwala Complex , Kandivali(E), Mumbai-400 101

Date of Appointment: 13.09.2010

By whom appointed: Members

For Gandhi City Hitek R & D Private Limited,
RAVINDRA V. JOSHI
LIQUIDATOR.

PD-126

IN THE KARNATAKA ADMINISTRATIVE TRIBUNAL AT BANGALORE

B.D.A. COMPLEX, INDIRANAGAR, BANGALORE-38

NOTIFICATION

No.BB/CB/58/2010, Dated:22nd September, 2010

Sub: Constitution of Vacation Bench.

Ref: Notification bearing No.KAT/EST(1)/VAC/92/2010, Dated:10.02.2010.

In exercise of the powers conferred under Section 5(2) & 5(6) read with Section 22 of the Administrative Tribunals Act, 1985 and all other powers enabling thereunto, the functioning of Vacation Bench for 'Dasara Vacation 2010' from 11.10.2010 to 15.10.2010 (bdi) is made as follows:

1. The Karnataka Administrative Tribunal will be closed for Dasara Vacation during the above period.
2. By Notification Dated:10.02.2010 the period of Dasara Vacation has been notified from 11.10.2010 to 15.10.2010 (bdi). The Division bench constituted will function as the Vacation Bench on Wednesday the 13th October, 2010 at 11.00 a.m. to hear urgent matters and such other matters as the Bench may direct.
3. The Office of the Karnataka Administrative Tribunal will function upto 2.00 p.m. during the Dasara Vacation. However, on the day of sitting of the Vacation Bench, the office will function upto 5.00 p.m.
4. During the vacation, the Registry will receive only urgent Applications as per Rules.

5. Separate Notification designating vacation Judges and constitution of Vacation Bench for Dasara Vacation will be issued separately.

BY ORDER OF HON'BLE THE ACTING CHAIRMAN

REGISTRAR

PR-1451

Karnataka Administrative Tribunal,

Bangalore-560038.

ಶಿಕ್ಷಣ ಇಲಾಖೆ

ಅಧಿಸೂಚನೆ

ಸಂಖ್ಯೆ: ಇಡಿ 105 ಡಿಜಿಎಂ 2009, ಬೆಂಗಳೂರು, ದಿನಾಂಕ:23ನೇ ಸೆಪ್ಟೆಂಬರ್, 2010

ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಗ್ರೂಪ್–ಎ ಕಿರಿಯ ಶ್ರೇಣಿಯ ಶಿಕ್ಷಣಾಧಿಕಾರಿ ವೃಂದದ ಹುದ್ದೆಗಳಲ್ಲಿ ನಿಯಮ–32ರಡಿ ಸ್ವತಂತ್ರ ಪ್ರಭಾರದಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಅಧಿಕಾರಿಗಳಿಗೆ ಭವಿಷ್ಯವರ್ತಿಯಾಗಿ ಅಧಿಸೂಚನೆ ಸಂಖ್ಯೆ:ಇಡಿ 703 ಡಿಪಿಐ 2006, ದಿನಾಂಕ:03.07.2007ರಂದು ಸ್ಥಾನಪನ್ನ ಬಡ್ತಿಯನ್ನು ನೀಡಲಾಗಿರುತ್ತದೆ. ದಿನಾಂಕ:09.05.2007ರಂದು ನಡೆದ ಇಲಾಖಾ ಮುಂಬಡ್ತಿ ಸಮಿತಿ ಸಭೆಯ ನಡವಳಿಯಲ್ಲಿ ಶ್ರೀ ಕೆ.ಆರ್. ನರಸಿಂಹಮೂರ್ತಿ, ಜೇಷ್ಠತಾ ಸಂಖ್ಯೆ:817–121, ಇವರ ಮೇಲೆ ಶಿಸ್ತು ಕ್ರಮ ಬಾಕಿ ಇದ್ದ ಹಿನ್ನೆಲೆಯಲ್ಲಿ ಪದೋನ್ನತಿಗೆ ಅರ್ಹತೆ ಹೊಂದಿದ್ದರೂ ಶಿಸ್ತು ಕ್ರಮ ಬಾಕಿ ಇದ್ದುದರಿಂದಾಗಿ ಬಡ್ತಿ ಪ್ರಕರಣ ಮುಚ್ಚಿದ ಲಕೋಟೆಯಲ್ಲಿಡಲು ಶಿಫಾರಸ್ಸು ಮಾಡಲಾಗಿತ್ತು.

ಶ್ರೀ ಕೆ.ಆರ್. ನರಸಿಂಹಮೂರ್ತಿ, ಇವರನ್ನು ದಿನಾಂಕ:16.10.2008ರಂದು ಆಪಾದನೆಗಳಿಂದ ದೋಷಮುಕ್ತಗೊಳಿಸಲಾಗಿರುತ್ತದೆ.

